## 2009-10 ನೇ ಸಾಲಿನ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು (ಯೋಜನೆ)- ಜಿಲ್ಲಾ ವಲಯ

## (ಲೆಕ್ಕ ಶೀರ್ಷಿಕೆ 2401-00-109-0-21 (ಯೋಜನೆ)- ಜಿಲ್ಲಾ ವಲಯ)

ಆಧುನಿಕ ಕೃಷಿ ತಂತ್ರಜ್ಞಾನದಲ್ಲಿ ಪುರುಷ ಮತ್ತು ಮಹಿಳಾ ರೈತರಿಗೆ, ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಯನ್ನು ನೀಡುವುದು ಈ ಯೋಜನೆಯ ಮುಖ್ಯ ಅಂಶವಾಗಿದೆ. ತರಬೇತಿ ಏರ್ಪಡಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡಬೇಕು.

ಅ) ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು
ಆ) ತಂತ್ರಜ್ಞಾನದ ಅವಶ್ಯಕತೆಯನ್ನು ಗುರುತಿಸಿ ಕಾರ್ಯಕ್ರಮ ರೂಪಿಸಬೇಕು.
ಇ) ಸಮಸ್ಯೆಗಳ/ಕೌಶಲ್ಯ ಆಧಾರಿತ ತರಬೇತಿಗೆ ಹೆಚ್ಚಿನ ಒತ್ತನ್ನು ನೀಡಬೇಕು.

ಕೃಷಿಯ ಹೊಸ ತಾಂತ್ರಿಕತೆಯ ಕೌಶಲ್ಯಗಳನ್ನು ತರಬೇತಿಗಾಗಿ ಬಂದಿರುವ ರೈತರಿಂದ/ರೈತ ಮಹಿಳೆಯರಿಂದಲೇ ಹಾಗೂ ವಿಸ್ತರಣಾ ಕಾರ್ಯಕರ್ತರಿಂದಲೇ ಪುನರಾವರ್ತನೆ / ಪೂರ್ವ ಅಭ್ಯಾಸ ಮಾಡಿಸಿ ಕೌಶಲ್ಯದ ತಾಂತ್ರಿಕತೆಯು ಮನದಟ್ಟಾಗುವಂತೆ ಮಾಡಲು ಹೆಚ್ಚಿನ ಒತ್ತು ನೀಡತಕ್ಕದ್ದು. ಕೃಷಿಗೆ ಸಂಬಂದಿಸಿದಂತೆ ಎಲ್ಲಾ ವಿಷಯಗಳನ್ನು ಅಂದರೆ, ಆಧುನಿಕ ಬೇಸಾಯ ಕ್ರಮ, ಕಟಾವಿನ ನಂತರದ ಕೃಷಿ ತಂತ್ರಜ್ಞಾನ, ಮಾರುಕಟ್ಟೆ ಸೌಲಭ್ಯ, ಮಾರುಕಟ್ಟೆಯ ಆಧಾರಿತ ಬೆಳೆಯ ಯೋಜನೆ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಕೃಷಿ ಆಧಾರಿತ ಕೈಗಾರಿಕೆ ಮುಂತಾದ ವಿಷಯಗಳ ಕುರಿತು ತರಬೇತಿಗಳನ್ನು ಅಳವಡಿಸತಕ್ಕದ್ದು. ಕೃಷಿಯಲ್ಲಿ ಆಸಕ್ತಿಯುಳ್ಳ, ಕೃಷಿಯಲ್ಲಿ ತೊಡಗಿಸಿಕೊಂಡಿರುವ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ರೈತರನ್ನು ತರಬೇತಿಗೆ ಆರಿಸಿಕೊಳ್ಳತಕ್ಕದ್ದು. ಯುವಕ ರೈತರಿಗೆ ಮತ್ತು ಮಧ್ಯ ವಯಸ್ಸುಳ್ಳ ರೈತರಿಗೆ ಆದ್ಯತೆ ನೀಡುವುದು. ಪರಿಶಿಷ್ಟ ಜಾತಿ ಮತ್ತು ವರ್ಗಗಳ ರೈತರಿಗೆ ಕೂಡ ಆದ್ಯತೆ ನೀಡುವುದು.

**ಪ್ರತಿ ತರಬೇತಿ ಕೇಂದ್ರದಲ್ಲಿ ಏರ್ಪಡಿಸಬೇಕಾದ ತರಬೇತಿಗಳ ವಿವರಗಳು ಇಂತಿವೆ.**

| ಕ್ರ.ಸಂ. | ತರಬೇತಿ | ರೈತರ ತರಬೇತಿ | ವಿಸ್ತರಣಾ ಕಾರ್ಯಕರ್ತರ ತರಬೇತಿ | ಒಟ್ಟು |
|---|---|---|---|---|
| 1 | ಮೂರು ದಿವಸಗಳ ತರಬೇತಿ | | | |
| | ತಂಡಗಳು | 11 | 2 | 13 |
| | ಅಭ್ಯರ್ಥಿಗಳು | 330 | 60 | 390 |
| 2 | ಐದು ದಿವಸಗಳ ತರಬೇತಿ | | | |
| | ತಂಡಗಳು | 5 | 1 | 6 |
| | ಅಭ್ಯರ್ಥಿಗಳು | 150 | 30 | 180 |
| | ಮಹಾಮೊತ್ತ ತಂಡಗಳು | 16 | 3 | 19 |
| | ಅಭ್ಯರ್ಥಿಗಳು | 480 | 90 | 570 |

- ತರಬೇತಿಗಳ ಅವಧಿಯನ್ನು ಸ್ಥಳೀಯ ವಿಷಯ ವ್ಯಾಪ್ತಿಗೆ ಅನುಗುಣವಾಗಿ ಸೀಮಿತಗೊಳಿಸತಕ್ಕದ್ದು. ಒಟ್ಟಾರೆ ಸೂಚಿತ ತರಬೇತಿ ಅವಧಿಗೆ ಅನುಗುಣವಾಗಿ ವಿವಿಧ ತರಬೇತಿಗಳನ್ನು ಅಗತ್ಯಾನುಸಾರ ಏರ್ಪಡಿಸತಕ್ಕದ್ದು.
- ವಿಸ್ತರಣಾ ಕಾರ್ಯಾಕರ್ತರ ಕೊರತೆ ಇರುವ ಜಿಲ್ಲೆಗಳಲ್ಲಿ ರೈತರ ತರಬೇತಿಗೆ ಹೆಚ್ಚಿನ ಆದ್ಯತೆ ನೀಡತಕ್ಕದ್ದು.
- ವಿಶಿಷ್ಠ ತರಬೇತಿಗಳನ್ನು ಏರ್ಪಡಿಸಲು ಅಗತ್ಯ ಸೌಕರ್ಯಗಳು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ಇಲ್ಲದೆ ಇದ್ದಾಗ ನಿಗದಿ ಪಡಿಸಿದ ತರಬೇತಿ ವೆಚ್ಚದಲ್ಲಿ ಅಭ್ಯರ್ಥಿಗಳ ಅಭಿಪ್ರಾಯಕ್ಕೆ ಅನುಗುಣವಾಗಿ ಹೊರ ಸಂಸ್ಥೆಗಳಲ್ಲಿ (ಸಂಬಂಧಪಟ್ಟ ನಿಯಮಗಳನ್ನು ಪರಿಪಾಲಿಸಿ) ತರಬೇತಿಗಳನ್ನು ಏರ್ಪಡಿಸಲು ಅನುಮತಿಸಿದೆ.

**ಪ್ರತಿ ತರಬೇತಿಗೆ ತಗಲುವ ವೆಚ್ಚದ ವಿವರಗಳು ಇಂತಿವೆ**

| ಕ್ರ.ಸಂ. | ತರಬೇತಿ | ರೈತರ ತರಬೇತಿ | ವಿಸ್ತರಣಾ ಕಾರ್ಯಕರ್ತರ ತರಬೇತಿ |
|---|---|---|---|
| 1 | ಮೂರು ದಿನಗಳ ತರಬೇತಿ | | |
| | ಪ್ರವಾಸ ಭತ್ಯೆ | 4500 | - |
| | ದಿನಭತ್ಯೆ | 9000 | 9000 |
| | ಅತಿಥಿ ಉಪನ್ಯಾಸ | 2400 | 2400 |
| | ಕ್ಷೇತ್ರ ಭೇಟಿ | 4250 | 4250 |
| | ತರಬೇತಿ ಸಾಮಗ್ರಿಗಳು | 700 | 700 |
| | ಒಟ್ಟು | 20850 | 16350 |
| 2 | ಐದು ದಿನಗಳ ತರಬೇತಿ | | |
| | ಪ್ರವಾಸ ಭತ್ಯೆ | 4500 | - |
| | ದಿನಭತ್ಯೆ | 15000 | 15000 |
| | ಅತಿಥಿ ಉಪನ್ಯಾಸ | 4000 | 4000 |
| | ಕ್ಷೇತ್ರ ಭೇಟಿ | 4250 | 4250 |
| | ತರಬೇತಿ ಸಾಮಗ್ರಿಗಳು | 700 | 700 |
| | **ಒಟ್ಟು** | **28450** | **23950** |

**ಪ್ರತಿ ತರಬೇತಿ ಕೇಂದ್ರದ ತರಬೇತಿ ಕಾರ್ಯಕ್ರಮಗಳ ಒಟ್ಟು ಆರ್ಥಿಕ ಕಾರ್ಯಕ್ರಮದ ವಿವರ**

| ಕ್ರ.ಸಂ. | ತರಬೇತಿ | ರೈತರ ತರಬೇತಿ | ವಿಸ್ತರಣಾ ಕಾರ್ಯಕರ್ತರ ತರಬೇತಿ | ಒಟ್ಟು |
|---|---|---|---|---|
| 1 | ಮೂರು ದಿನಗಳ ತರಬೇತಿ | 11 X 20850=229350 | 2 X 16350=32700 | 262050 |
| 2 | ಐದು ದಿನಗಳ ತರಬೇತಿ | 5 X 28450=142250 | 1 X 23950=23950 | 166200 |
| | ಮಹಾ ಮೊತ್ತ | **371600** | **56650** | **428250** |
| | | **4.28 ಲಕ್ಷ ರೂ.ಗಳಿಗೆ ಮಿತಿಗೊಳಿಸಲಾಗಿದೆ.** | | |

**ಸಾಂಸ್ಥಿಕ ತರಬೇತಿಗಳನ್ನು ಏರ್ಪಡಿಸುವಾಗ ಗಮನಿಸಬೇಕಾದ ಅಂಶಗಳು**

ಸಾಂಸ್ಥಿಕ ತರಬೇತಿಗಳನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಅಥವಾ ಸರ್ಕಾರೇತರ ಸಂಸ್ಥೆಗಳಲ್ಲಿ ಏರ್ಪಡಿಸುವುದು. ಈ ತರಬೇತಿಗಳನ್ನು ನಡೆಸುವಾಗ ಪ್ರತಿ ತಂಡದಲ್ಲಿ 30 ರೈತರು / ವಿಸ್ತರಣಾ ಕಾರ್ಯಕರ್ತರು ಇರಬೇಕು. ಪ್ರತಿ ತರಬೇತಿ ತಂಡಕ್ಕೆ ರೂ.700 ಗಳನ್ನು ತರಬೇತಿ ಸಾಮಗ್ರಿಗಳಿಗೆ ಬಳಸಲು ಮತ್ತು ಪ್ರತಿ ಅತಿಥಿ ಉಪನ್ಯಾಸಕ್ಕೆ ರೂ.200 ರಂತೆ ಗೌರವಧನ ಪಾವತಿಸಲು ಅವಕಾಶವಿದೆ. ಪ್ರತಿ ತರಬೇತಿಗೆ ಹಾಜರಾಗುವ ವಿಸ್ತರಣಾ ಕಾರ್ಯಕರ್ತರಿಗೆ ರೂ.100 ರಂತೆ ದಿನಭತ್ಯೆ ನೀಡಬೇಕು. ರೈತರಿಗೆ ತರಬೇತಿ ನೀಡುವಾಗ ಪ್ರತಿ ದಿವಸಕ್ಕೆ ರೂ.100 ರಂತೆ ದಿನಭತ್ಯೆ ಮತ್ತು ಕೇಂದ್ರಕ್ಕೆ ಬಂದು ಹೋಗುವ ವಾಸ್ತವಿಕ ಪ್ರಯಾಣ ವೆಚ್ಚವನ್ನು ಭರಿಸಬೇಕು. ತರಬೇತಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಅಭ್ಯರ್ಥಿಗಳ ಸಕ್ರಿಯ ಸಹಭಾಗಿತ್ವದೊಂದಿಗೆ ಕೌಶಲ್ಯ ಕಲಿಕೆ ರೂಪದಲ್ಲಿ ಏರ್ಪಡಿಸಬೇಕು. ಇಲಾಖೆಯಲ್ಲಿ ಇರುವ ಮಾಸ್ಟರ್ ಟ್ರೇನರ್ಸ್ ಮತ್ತು ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಈ ತರಬೇತಿಗಳಿಗೆ ಬಳಸಿಕೊಳ್ಳಬೇಕು.

## 2.ಕಛೇರಿ ವೆಚ್ಚ

ಪ್ರತಿ ಕೇಂದ್ರಕ್ಕೆ ನಿಗದಿ ಪಡಿಸಿದ ಬಾಬ್ತಿನಲ್ಲಿ ಸಾದಿಲ್ವಾರು ಕೈಪಿಡಿ ಅನ್ವಯ ಕಛೇರಿ ವೆಚ್ಚಗಳನ್ನು ಭರಿಸುವುದು.

## 3.ಕಟ್ಟಡ ವೆಚ್ಚಗಳು

ತರಬೇತಿ ಕೇಂದ್ರದ ಆವರಣದ ನಿರ್ವಹಣೆ ಮತ್ತು ಕಟ್ಟಡಗಳ ದುರಸ್ತಿ, ನವೀಕರಣ, ಸೌರ ಶಕ್ತಿ ಬಳಕೆ, ನೀರಿನ ಕೊಯ್ಲು, ಪ್ರಾತ್ಯಕ್ಷಿಕೆಗೆ ಬೇಕಾಗಿರುವ ಸೌಲಭ್ಯಗಳು ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕುರಿತ ವೆಚ್ಚಗಳನ್ನು ಭರಿಸುವುದು. ತರಬೇತಿ ಕೇಂದ್ರಕ್ಕೆ ಪೂರಕವಾದ ಕಾಮಗಾರಿಗಳಿಗೆ (ಕಟ್ಟಡಗಳ ಸುಣ್ಣ, ಬಣ್ಣ, ಸಣ್ಣ-ಪುಟ್ಟ ದುರಸ್ತಿ ಕಾಮಗಾರಿಗಳಿಗೆ, ನೀರಿನ ಸೌಲಭ್ಯ ಕಲ್ಪಿಸುವ ಕಾಮಗಾರಿಗಳಿಗೆ ಮತ್ತು ಇತರೆ ಕಾಮಗಾರಿಗಳು) ಆದ್ಯತೆ ನೀಡತಕ್ಕದ್ದು.

## 4.ಯಂತ್ರ ಮತ್ತು ಸಾಧನ ಸಾಮಗ್ರಿಗಳು

ತರಬೇತಿ ಕೇಂದ್ರಗಳಲ್ಲಿ ತರಬೇತಿಗೆ ಪೂರಕವಾದ ಪೀಠೋಪಕರಣಗಳು, ಶ್ರವಣ-ದೃಶ್ಯ ಸಾಧನಗಳು ಇತ್ಯಾದಿ ಸಲಕರಣೆಗಳ ನಿರ್ವಹಣೆ, ದುರಸ್ತಿ ಮತ್ತು ಖರೀದಿ ಕುರಿತಾದ ವೆಚ್ಚಗಳನ್ನು ನಿಯಮಾನುಸಾರ ಭರಿಸುವುದು.

**ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು (ಯೋಜನೆ) - ಜಿಲ್ಲಾ ವಲಯದಡಿಯಲ್ಲಿನ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಆರ್ಥಿಕ ವಿಂಗಡನೆ (ಲೆಕ್ಕ ಶೀರ್ಷಿಕೆ 2401-00-109-0-21(ಯೋಜನೆ) - ಜಿಲ್ಲಾ ವಲಯ)**

(ಲಕ್ಷ ರೂ. ಗಳಲ್ಲಿ)

| ಕ್ರ. ಸಂ | ಜಿಲ್ಲೆ | ಸಾಂಸ್ಥಿಕ ತರಬೇತಿ | ಕಛೇರಿ ವೆಚ್ಚ | ಕಟ್ಟಡ ವೆಚ್ಚಗಳು | ಯಂತ್ರ ಸಾಧನ ಸಾಮಗ್ರಿಗಳು | ಒಟ್ಟು |
|---|---|---|---|---|---|---|
| 1. | ಬೆಂಗಳೂರು (ನ) | 4.00 | 0 | 0 | 0 | 4.00 |
| 2. | ಬೆಂಗಳೂರು (ಗ್ರಾ) | 3.64 | 0 | 0 | 0 | 3.64 |
| 3. | ರಾಮನಗರ | 3.96 | 0 | 0 | 0 | 3.96 |
| 4. | ಕೋಲಾರ | 2.70 | 0 | 0 | 0 | 2.70 |
| 5. | ಚಿಕ್ಕಬಳ್ಳಾಪುರ | 4.28 | 0 | 0 | 0 | 4.28 |
| 6. | ತುಮಕೂರು | 4.28 | 0.68 | 0 | 0 | 4.96 |
| 7. | ಶಿವಮೊಗ್ಗ | 3.07 | 0 | 0 | 0 | 3.07 |
| 8. | ಚಿತ್ರದುರ್ಗ | 4.28 | 0.51 | 2.00 | 0.80 | 7.59 |
| 9. | ದಾವಣಗೆರೆ | 4.28 | 1.00 | 2.46 | 2.00 | 9.74 |
| 10. | ಮೈಸೂರು | 4.28 | 0.33 | 0.50 | 0 | 5.11 |
| 11. | ಚಾಮರಾಜನಗರ | 3.50 | 0 | 0 | 0 | 3.50 |
| 12. | ಮಂಡ್ಯ | 4.28 | 0.75 | 0.75 | 0.50 | 6.28 |
| 13. | ಕೊಡಗು | 1.55 | 0 | 0 | 0 | 1.55 |
| 14. | ಹಾಸನ | 4.28 | 0 | 0 | 0 | 4.28 |
| 15. | ಚಿಕ್ಕಮಗಳೂರು | 4.28 | 1 | 0.92 | 1.00 | 7.20 |
| 16. | ದಕ್ಷಿಣ ಕನ್ನಡ | 4.28 | 0.50 | 0 | 0.38 | 5.16 |
| 17. | ಉಡುಪಿ | 1.22 | 0.07 | 0 | 0 | 1.29 |
| 18. | ಧಾರವಾಡ | 4.28 | 0.50 | 0.50 | 0.45 | 5.73 |
| 19. | ಗದಗ | 4.28 | 0.20 | 0 | 0 | 4.48 |
| 20. | ಹಾವೇರಿ | 4.28 | 0.05 | 0 | 0 | 4.33 |
| 21. | ಉತ್ತರ ಕನ್ನಡ | 4.28 | 0.50 | 0 | 0.38 | 5.16 |
| 22. | ಬೆಳಗಾವಿ | 4.28 | 0.50 | 0 | 0.22 | 5.00 |
| 23. | ವಿಜಾಪುರ | 4.28 | 1.00 | 0.59 | 1.00 | 6.87 |
| 24. | ಬಾಗಲಕೋಟೆ | 4.28 | 1.00 | 0.33 | 1.00 | 6.61 |
| 25. | ರಾಯಚೂರು | 4.28 | 0.50 | 1.00 | 0.75 | 6.53 |
| 26. | ಕೊಪ್ಪಳ | 4.28 | 1.50 | 3.22 | 2.00 | 11.00 |
| 27. | ಬಳ್ಳಾರಿ | 4.28 | 0.50 | 0.46 | 0.50 | 5.74 |
| 28. | ಗುಲ್ಬರ್ಗಾ | 4.28 | 0.10 | 0 | 0 | 4.38 |
| 29. | ಬೀದರ್ | 4.28 | 0.30 | 0 | 0 | 4.58 |
| | **ಒಟ್ಟು** | **113.52** | **11.49** | **12.73** | **10.98** | **148.72** |

**ಸೂಚನೆ**

1. ಲೆಕ್ಕ ಶೀರ್ಷಿಕೆ 2401-00-109-0-21 ಅಡಿಯಲ್ಲಿ ಎರಡು ಕಾರ್ಯಕ್ರಮಗಳಿಗೆ (ಅಂದರೆ ರೈತ ಸಂಪರ್ಕ ಕೇಂದ್ರಗಳು-228.57 ಲಕ್ಷರೂ.ಗಳು ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು-148.72 ಲಕ್ಷರೂ.ಗಳು) ಅನುದಾನವನ್ನು ಬಿಡುಗಡೆ ಮಾಡುವುದರಿಂದ ಜಿಲ್ಲಾ ಪಂಚಾಯಿತಿಯಿಂದ ಅನುದಾನ ಬಿಡುಗಡೆಯಾದ ನಂತರ ಜಿಲ್ಲಾವಾರು/ಕಾರ್ಯಕ್ರಮವಾರು ಅನುದಾನ ಹಂಚಿಕೆಯನ್ನು ಗಮನಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.
2. ಬೆಂಗಳೂರು (ನ) ಮತ್ತು ರಾಮನಗರ ಜಿಲ್ಲೆಗಳಿಗೆ ಸಾಂಸ್ಥಿಕ ತರಬೇತಿ ಘಟಕಕ್ಕೆ ಬೇಕಾಗಿರುವ ಒಟ್ಟು ಅನುದಾನ 4.28 ಲಕ್ಷ ರೂ.ಗಳನ್ನು ಕ್ರಮವಾಗಿ 4.00 ಹಾಗೂ 3.96 ಲಕ್ಷರೂ.ಗಳಿಗೆ ಮಿತಿಗೊಳಿಸಲಾಗಿದೆ.
3. ಕ್ರಮ ಸಂಖ್ಯೆ 2, 4, 7, 11, 13 ಮತ್ತು 17 ಜಿಲ್ಲೆಗಳಿಗೆ ಸಾಂಸ್ಥಿಕ ತರಬೇತಿ ಘಟಕಕ್ಕೆ ಬೇಕಾಗಿರುವ ಒಟ್ಟು ಅನುದಾನ 4.28 ಲಕ್ಷ ರೂ.ಗಳಿಗೆ ಸರಿದೂಗುವಂತೆ ಉಳಿದ ಅನುದಾನವನ್ನು ಲೆ/ಶೀ 2401-00-109-0-21(ಯೋಜನೆ) -ರಾಜ್ಯವಲಯ ಅಡಿಯಲ್ಲಿ ಒದಗಿಸಲಾಗಿದೆ.

## 2009-10 ನೇ ಸಾಲಿನ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು (ಯೋಜನೆ) - ರಾಜ್ಯ ವಲಯ

## (ಲೆಕ್ಕ ಶೀರ್ಷಿಕೆ 2401-00-109-0-21 (ಯೋಜನೆ) ಉಪ ಶೀರ್ಷಿಕೆ : 200 ನಿರ್ವಹಣೆ)

ರಾಜ್ಯ ವಲಯದ ಕಾರ್ಯಕ್ರಮದಲ್ಲಿ 2009-10 ನೇ ಸಾಲಿಗೆ ರೂ.85.00 ಲಕ್ಷ ಅನುದಾನ ಒದಗಿಸಿದ್ದು ಜಿಲ್ಲಾವಾರು ಅನುದಾನ ಹಂಚಿಕೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಜಿಲ್ಲಾ ಕೃಷಿ ತರಬೇತಿ ಕೇಂದ್ರ ವಿಜಾಪುರ ಮತ್ತು ಔರಾದ್ ಇವುಗಳಿಗೆ ನೂತನ ಕಟ್ಟಡ ಒದಗಿಸುವ ದಿಸೆಯಲ್ಲಿ ಮಾದರಿ ವಿನ್ಯಾಸಗಳನ್ನು ರಾಜ್ಯ ಲೋಕೋಪಯೋಗಿ ಇಲಾಖೆಯ ಮುಖ್ಯ ವಾಸ್ತು ಶಿಲ್ಪಿಗಳಿಂದ ಅನುಮೋದಿಸಿ ಒದಗಿಸಲಾಗಿದ್ದು, 2007-08ನೇ ಸಾಲಿನಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬಿಜಾಪುರ ಇವರಿಗೆ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.37.00 ಲಕ್ಷಗಳನ್ನು ಬಳಸಿಕೊಂಡು ರೂ.13.00 ಲಕ್ಷಗಳನ್ನು ಅಧ್ಯರ್ಪಣೆ ಮಾಡಿರುತ್ತಾರೆ. 2008-09 ನೇ ಸಾಲಿನಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬಿಜಾಪುರ ಇವರಿಗೆ ರೂ.30.00 ಲಕ್ಷಗಳಂತೆ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಔರಾದ್ ಇವರಿಗೆ ರೂ. 5.41 ಲಕ್ಷಗಳಂತೆ ಬಿಡುಗಡೆ ಮಾಡಲಾಗಿದೆ. ಇದಕ್ಕೆ ಪೂರಕವಾಗಿ 2009-10ನೇ ಸಾಲಿನಲ್ಲಿ ಬೀದರ್ ಜಿಲ್ಲಾ ಕೃಷಿ ತರಬೇತಿ ಕೇಂದ್ರಕ್ಕೆ ರೂ. 50.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ. ಬಿಡುಗಡೆ ಮಾಡುವ ಅನುದಾನವನ್ನು ಸದರಿ ಕಾಮಗಾರಿಗಳಿಗೆ ಮರು ಬಿಡುಗಡೆ ಮಾಡಲು ಮತ್ತು ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸದರಿ ಕೇಂದ್ರಗಳ ಮುಖ್ಯಸ್ಥರುಗಳು ಮತ್ತು ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಕ್ರಮ ವಹಿಸತಕ್ಕದ್ದು.

| |
|---|
| ಈ ಕಾರ್ಯಕ್ರಮದಡಿ ವೆಚ್ಚ ಭರಿಸುವಾಗ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು - ಜಿಲ್ಲಾ ವಲಯ ಅಡಿಯಲ್ಲಿ ನೀಡಿರುವ ಘಟಕವಾರು ಮಾರ್ಗಸೂಚಿಗಳನ್ನು ತಪ್ಪದೇ ಪರಿಪಾಲಿಸತಕ್ಕದ್ದು. |

**ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು (ಯೋಜನೆ) - ರಾಜ್ಯ ವಲಯದಡಿಯಲ್ಲಿನ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಆರ್ಥಿಕ ವಿಂಗಡನೆ (ಲೆಕ್ಕ ಶೀರ್ಷಿಕೆ 2401-00-109-0-21(ಯೋಜನೆ) - ರಾಜ್ಯ ವಲಯ ಉಪ ಶೀರ್ಷಿಕೆಃ 200-ನಿರ್ವಹಣೆ) (ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ಜಿಲ್ಲೆ | ಸಾಂಸ್ಥಿಕ ತರಬೇತಿ | ಕಟ್ಟಡ ವೆಚ್ಚಗಳು | ಒಟ್ಟು |
|---|---|---|---|---|
| 1 | ಬೆಂಗಳೂರು (ನ) | 0 | 0 | 0 |
| 2 | ಬೆಂಗಳೂರು (ಗ್ರಾ) | 0.64 | 0 | 0.64 |
| 3 | ರಾಮನಗರ | 0 | 0 | 0 |
| 4 | ಕೋಲಾರ | 1.58 | 0 | 1.58 |
| 5 | ಚಿಕ್ಕಬಳ್ಳಾಪುರ | 0 | 0 | 0 |
| 6 | ತುಮಕೂರು | 0 | 0 | 0 |
| 7 | ಶಿವಮೊಗ್ಗ | 1.21 | 0 | 1.21 |
| 8 | ಚಿತ್ರದುರ್ಗ | 0 | 0 | 0 |
| 9 | ದಾವಣಗೆರೆ | 0 | 0 | 0 |
| 10 | ಮೈಸೂರು | 0 | 0 | 0 |
| 11 | ಚಾಮರಾಜನಗರ | 0.78 | 0 | 0.78 |
| 12 | ಮಂಡ್ಯ | 0 | 0 | 0 |
| 13 | ಕೊಡಗು | 2.73 | 0 | 2.73 |
| 14 | ಹಾಸನ | 0 | 0 | 0 |
| 15 | ಚಿಕ್ಕಮಗಳೂರು | 0 | 0 | 0 |
| 16 | ದಕ್ಷಿಣ ಕನ್ನಡ | 0 | 0 | 0 |
| 17 | ಉಡುಪಿ | 3.06 | 0 | 3.06 |
| 18 | ಧಾರವಾಡ | 0 | 0 | 0 |
| 19 | ಗದಗ | 0 | 0 | 0 |
| 20 | ಹಾವೇರಿ | 0 | 0 | 0 |
| 21 | ಉತ್ತರ ಕನ್ನಡ | 0 | 0 | 0 |
| 22 | ಬೆಳಗಾವಿ | 0 | 0 | 0 |
| 23 | ವಿಜಾಪುರ | 0 | 0 | 0 |
| 24 | ಬಾಗಲಕೋಟೆ | 0 | 0 | 0 |
| 25 | ರಾಯಚೂರು | 0 | 0 | 0 |
| 26 | ಕೊಪ್ಪಳ | 0 | 0 | 0 |
| 27 | ಬಳ್ಳಾರಿ | 0 | 0 | 0 |
| 28 | ಗುಲ್ಬರ್ಗಾ | 0 | 0 | 0 |
| 29 | ಬೀದರ್ | 0 | 50.00 | 50.00 |
| | ಕೇಂದ್ರ ಕಛೇರಿ | 0 | 25.00 | 25.00 |
| | **ಒಟ್ಟು** | **10.00** | **75.00** | **85.00** |

## ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಉನ್ನತಿಕರಣ

## ಲೆಕ್ಕ ಶೀರ್ಷಿಕೆ 2401-00-800-3-05(ಯೋಜನೆ) ಉಪ ಶೀರ್ಷಿಕೆ 059

ಆದ್ಯತೆಯ ಮೇಲೆ ಕೈಗೊಳ್ಳಬೇಕಾಗುವ ಕಾಮಗಾರಿಗಳ ವಿವರ

1. **ಹಾಸ್ಟೆಲ್ ಕಟ್ಟಡ ನಿರ್ಮಾಣ**
   - ಮೂರು ಅಭ್ಯರ್ಥಿಗಳಿಗೆ ಒಂದು ಕೊಠಡಿಯಂತೆ ಪ್ರತಿ ಕೊಠಡಿಗೆ ಶೌಚಾಲಯವಿರುವ 10 ಕೊಠಡಿಗಳು.
   - ಅಡಿಗೆ ಮನೆ ಮತ್ತು ಉಗ್ರಣ ಕೊಠಡಿ
   - ಊಟದ ಕೊಠಡಿ
   - ಶೌಚಾಲಯ
2. **ನೀರಿನ ಸೌಲಭ್ಯ ಒದಗಿಸುವ ಕಾಮಗಾರಿಗಳು**
   - ಕೊಳವೆ ಬಾವಿ
   - ನೀರಿನ ಸರಬರಾಜು ಮಾಡಲು ಬೇಕಾಗುವ ಸಾಮಗ್ರಿಗಳು
   - ಟ್ಯಾಂಕ್ ನಿರ್ಮಾಣ
3. **ಸೌರಶಕ್ತಿ ಬಳಕೆಯ ಕಾಮಗಾರಿಗಳು**
   - ಬೀದಿ ದೀಪ
   - ವಾಟರ್ ಹೀಟರ್ಸ್/ಗುಜರಾತ್ ಬಾಯಲರ್
   - ಸೌರ ಶಕ್ತಿ ದೀಪಗಳು/ ಲ್ಯಾಂಟರ್ನ್ಸ್
4. **ತರಬೇತಿ ಕೇಂದ್ರ ನಿರ್ಮಾಣ ಘಟಕದಡಿಯಲ್ಲಿ**
   - ಉಪ ಕೃಷಿ ನಿರ್ದೇಶಕರ ಕಛೇರಿ
   - ಬೋಧಕರ ಕೊಠಡಿ
   - ಗ್ರಂಥಾಲಯ
   - ವಸ್ತು ಸಂಗ್ರಹಾಲಯ
   - ಸಿಬ್ಬಂದಿ ಕೊಠಡಿ
   - ಸಭಾಂಗಣ/ಸೆಮಿನಾರ್ ಹಾಲ್
   - ಮನೋರಂಜನಾ ಕೊಠಡಿ ಮತ್ತು ಸಾಮಗ್ರಿಗಳು
   - ಕಾರಿಡಾರ್
5. **ಪರಿಣಾಮಕಾರಿ ತರಬೇತಿಗೆ ಪೂರಕವಾದ ಬೋಧನಾ ಸಾಮಗ್ರಿಗಳು ನಿಯಮಾನುಸಾರ ಖರೀದಿಸುವುದು.**
   - ಶ್ರವಣ ದೃಶ್ಯ ಸಾಮಗ್ರಿಗಳು
   - ಗಣಕಯಂತ್ರ, ಜೆರಾಕ್ಸ್ ಯಂತ್ರ, ಲ್ಯಾಪ್ ಟಾಪ್
   - ದೂರವಾಣಿ
6. **ವಾಹನ ಸೌಲಭ್ಯ**
   - ಅಭ್ಯರ್ಥಿಗಳಿಗೆ ವಾಹನ ಸೌಲಭ್ಯ ಒದಗಿಸುವುದು(ಕ್ಷೇತ್ರ ಭೇಟಿ)
   - ರೈತರಿಗೆ ಮತ್ತು ರೈತ ಮಹಿಳೆಯರಿಗೆ ತರಬೇತಿ ಕೇಂದ್ರಕ್ಕೆ ಬಂದು ಹೋಗಲು ಮತ್ತು ಕ್ಷೇತ್ರಭೇಟಿಗೆ ಅನುಕೂಲವಾಗುವಂತೆ ವಾಹನ ಸೌಲಭ್ಯ ಒದಗಿಸುವುದು (30 ಆಸನವುಳ್ಳ ವಾಹನ).
7. **ತರಬೇತಿ ಕೇಂದ್ರದ ಬೋಧನಾ ಕೊಠಡಿ, ಗ್ರಂಥಾಲಯ ಮತ್ತು ಸಂಗ್ರಹಾಲಯಕ್ಕೆ ಪೂರಕವಾದ ಪೀಠೋಪಕರಣಗಳನ್ನು ಒದಗಿಸುವುದು.**
8. **ವಸತಿ ಗೃಹಗಳ ನಿರ್ಮಾಣ**
9. **ತರಬೇತಿ ಕೇಂದ್ರದ ಆವರಣದಲ್ಲಿ ಕೈಗೊಳ್ಳಬೇಕಾಗಿರುವ ಅಹ್ಲಾದಕರ ವಾತಾವರಣ ಉಂಟು ಮಾಡುವ ಅಲಂಕಾರಿಕ ಕಾಮಗಾರಿಗಳು.**

ಮೇಲಿನಂತೆ ಆದ್ಯತೆ ಮೇಲೆ ಕಾಮಗಾರಿಗಳ ವಿವರವನ್ನು ಉಪ ಕೃಷಿ ನಿರ್ದೇಶಕರು (ಜಿಲ್ಲಾ ಕೃಷಿ ತರಬೇತಿ ಕೇಂದ್ರ) ಗಳು ನೀಡಿದ ನಂತರ ಆರ್ಥಿಕ ಕಾರ್ಯಕ್ರಮ ಹಂಚಿಕೆ ಮಾಡಲಾಗುವುದು.

## ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳ ವಿವರಗಳು

**ಜಿ.ಕೃ.ತ.ಕೇಂ- ಹೆಸರು** **ಅಂಚೆ ವಿಳಾಸ**

**ನಮೂನೆ**

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಷರಾ/ಸ್ಪಷ್ಟೀಕರಣ |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | ಮಹಾ ಮೊತ್ತ | | - |

ತರಬೇತಿ ಕೇಂದ್ರದ ಮುಖ್ಯಸ್ಥರ ಸಹಿ

**ಸೂಚನೆಃ**

ಆದ್ಯತೆ ಮೇಲೆ ಕಾಮಗಾರಿಯ ಆಯ್ಕೆಯ ಕುರಿತು ಸ್ಪಷ್ಟೀಕರಣವನ್ನು ಷರಾ ಕಾಲಂನಲ್ಲಿ ನಮೂದಿಸುವುದು.
ಕಾಮಗಾರಿಗಳನ್ನು ಕೆಳಕಂಡಂತೆ ವರ್ಗೀಕರಣ ಮಾಡತಕ್ಕದ್ದು.
ಕಾಮಗಾರಿಗಳು ಃ-

1. ತರಬೇತಿ ಕೇಂದ್ರದ ಕಾಮಗಾರಿಗಳು
2. ಹಾಸ್ಟಲ್ ಕಾಮಗಾರಿಗಳು
3. ಸೌರಶಕ್ತಿ ಬಳಕೆಯ ಕಾಮಗಾರಿಗಳು
4. ಕುಡಿಯುವ ನೀರಿನ ಸೌಲಭ್ಯಗಳ ಕಾಮಗಾರಿಗಳು
5. ಶ್ರವಣ ದೃಶ್ಯ ಸಾಧನಗಳು
6. ವಾಹನ ಸೌಲಭ್ಯಗಳು
7. ಕಾಮಗಾರಿಯ ವರ್ಗೀಕರಣ ಅನ್ವಯ ಅಂದಾಜು ಮೊತ್ತದ ಮಾಹಿತಿ ಹಾಗೂ ಮಹಾ ಮೊತ್ತವನ್ನು ನಮೂದಿಸಬೇಕು

# 2009-10ನೇ ಸಾಲಿನ ವೈಟೆಪ್ ಕಾರ್ಯಕ್ರಮ

## ಲೆಕ್ಕ ಶೀರ್ಷಿಕೆ 2401-00-109-0-80 (ಯೋಜನೇತರ)

ರೈತ ಮಹಿಳೆಯರಿಗೆ ಆಧುನಿಕ ಕೃಷಿ ಬಗ್ಗೆ ತರಬೇತಿ ನೀಡುವುದು, ಮುಂದಾಳತ್ವ ಗುಣಗಳನ್ನು ಅಳವಡಿಸಲು ಸಹಕರಿಸುವುದು, ಉದ್ಯಮ ಶೀಲತೆಗೆ ಪ್ರೋತ್ಸಾಹ ನೀಡುವ ಮೂಲಕ ಸ್ವಾವಲಂಬಿಯಾಗಿಸುವುದು, ತರಬೇತಿ ಹೊಂದಿದ ರೈತ ಮಹಿಳೆಯರಿಗೆ ವಿಶೇಷ ತರಬೇತಿ ಏರ್ಪಡಿಸುವ ಮೂಲಕ ಗುಂಪು ವಿಸ್ತರಣಾ ಚಟುವಟಿಕೆಯಲ್ಲಿ ನೆರವಾಗುವಂತೆ ಕ್ರಮ ವಹಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ.1982-83 ರಿಂದ 2004-05 ರ ವರೆಗೆ ಡ್ಯಾನಿಡಾ ನೆರವಿನೊಂದಿಗೆ ಜಾರಿಯಲ್ಲಿದ್ದ ಈ ಕಾರ್ಯಕ್ರಮವನ್ನು 2005-06ನೇ ಸಾಲಿನಿಂದ ಸಂಪೂರ್ಣವಾಗಿ ರಾಜ್ಯದ ಸಂಪನ್ಮೂಲಗಳೊಂದಿಗೆ ಜಾರಿ ಮಾಡಲಾಗುತ್ತಿದ್ದು, 2007-08ನೇ ಸಾಲಿನಿಂದ ಯೋಜನೇತರ ವಲಯಕ್ಕೆ ವರ್ಗಾಯಿಸಿದ್ದು, 2009-10ನೇ ಸಾಲಿಗೂ ಯೋಜನೇತರ ವಲಯದ ಅಡಿಯಲ್ಲಿ ಮುಂದುವರಿಸಲಾಗಿದೆ.

ವಿವಿಧ ಉಪಶೀರ್ಷಿಕೆಗಳು ಮತ್ತು ಸಂಬಂಧಪಟ್ಟ ಘಟಕಗಳ ಅನುದಾನ ಹಂಚಿಕೆ ವಿವರ ಇಂತಿದೆ.

| ಸಂ | ಲೆಕ್ಕ ಉಪ ಶೀರ್ಷಿಕೆ | ಘಟಕ | ಅನುದಾನ ಅವಕಾಶ (ಲಕ್ಷ ರೂ.ಗಳಲ್ಲಿ) |
|---|---|---|---|
| 1. | ಪೂರಕ ವೆಚ್ಚಗಳು - 015 | 1. ತರಬೇತುದಾರರ ತರಬೇತಿ | 4.50 |
| | | 2. ಹಂಗಾಮು ಪೂರ್ವ ತರಬೇತಿ | 10.00 |
| | | 3.ಸಮಗ್ರ ಫಲಿತಾಂಶ ಪ್ರಾತ್ಯಕ್ಷತೆ | 20.00 |
| | | 4. ರೈತ ಮಹಿಳೆಯರ ಅಧ್ಯಯನ ಪ್ರವಾಸ | 23.27 |
| | | 5. ಬೀಜ ಧನ | 81.25 |
| | | 6. ಪೈಲಟಿಂಗ್ ಅಗ್ರೊ ಎಂಟರ್ ಪ್ರೈಸಸ್ | 80.12 |
| | | 7. ಸಾಂಸ್ಥಿತ ತರಬೇತಿ | 31.68 |
| | | 8. ಸಂಪರ್ಕ ಕಾರ್ಯಕರ್ತೆಯರ ತರಬೇತಿ | 25.52 |
| | | 9. ವಿಶೇಷ ತರಬೇತಿ | 24.36 |
| | | 10. ಜಿಲ್ಲಾ ಮಟ್ಟದ ತಾಂತ್ರಿಕ ಸಮಾವೇಶ | 7.25 |
| | | 11. ರಾಜ್ಯ ಮಟ್ಟದ ತಾಂತ್ರಿಕ ಸಮಾವೇಶ | 7.00 |
| | | ಒಟ್ಟು | 314.95 |
| 2 | ಪ್ರಯಾಣ ವೆಚ್ಚ - 041 | 12.ಪ್ರಯಾಣ ಭತ್ಯೆ | 45.00 |
| 3 | ಸಾಮಾನ್ಯ ವೆಚ್ಚಗಳು - 051 | 13. ಕಛೇರಿ ವೆಚ್ಚ / ವಿಸ್ತರಣಾ ಸಾಹಿತ್ಯ ಮತ್ತು ಪ್ರಚಾರ | 33.73 |
| 4 | ನಿರ್ವಹಣೆ - 200 | 14. ವಾಹನ ನಿರ್ವಹಣೆ - ಬಾಡಿಗೆ/ ಕಟ್ಟಡಗಳ ನಿರ್ವಹಣೆ | 56.24 |
| 5 | ವೇತನ | 15. ಅಧಿಕಾರಿ/ಸಿಬ್ಬಂದಿ ವೇತನ, ತುಟ್ಟಿ ಭತ್ಯೆ, ಇತರ ಭತ್ಯೆ | 314.31 |
| | **ಮಹಾ ಮೊತ್ತ** | **(1+2+3+4+5)** | **764.23** |

**ಘಟಕವಾರು ಮಾರ್ಗಸೂಚಿಯ ವಿವರಗಳು ಇಂತಿವೆ.**

### ಸಿಬ್ಬಂದಿ ಅಭಿವೃದ್ಧಿ ಕಾರ್ಯಕ್ರಮಃ

**ತರಬೇತುದಾರರ ತರಬೇತಿ:**

- ಈ ತರಬೇತಿಯನ್ನು ಸಾಮಾನ್ಯ ವಿಸ್ತರಣಾ ವ್ಯವಸ್ಥೆ, ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಸಹಾಯಕರು ಸೇರಿದಂತೆ ತರಬೇತಿ ಕೇಂದ್ರಗಳ ಮತ್ತು ಇತರ ಅಧಿಕಾರಿಗಳ ಸಲುವಾಗಿ ನಡೆಸಲಾಗುತ್ತದೆ. ಐದು ದಿವಸಗಳ ಈ ತರಬೇತಿಯನ್ನು ಆಯ್ದ ತರಬೇತಿ ತಜ್ಞರ ಮಾರ್ಗದರ್ಶನದಲ್ಲಿ ರೂಪಿಸಿ ನಡೆಸಬೇಕು. MANAGE

ಹೈದ್ರಾಬಾದ್, iACT ಮತ್ತು ಡೆನ್‌ಮಾರ್ಕ್ ನಲ್ಲಿ ತರಬೇತಿ ಪಡೆದ ತರಬೇತುದಾರರ ಸೇವೆಯನ್ನು ಈ ಕುರಿತು ಬಳಸಿಕೊಳ್ಳಬೇಕು.

- ಈ ತರಬೇತಿಗೆ 2008-09ನೇ ಸಾಲಿನಲ್ಲಿ ಹೊಸದಾಗಿ ನೇಮಕಗೊಂಡ ಕೃಷಿ ಅಧಿಕಾರಿಗಳನ್ನು ಆದ್ಯತೆ ಮೇಲೆ ನಿಯೋಜಿಸತಕ್ಕದ್ದು.
- ಪ್ರತಿ ತಂಡದಲ್ಲಿ 30 ಜನರಿದ್ದು ಪ್ರತಿ ತರಬೇತಿಯ ವೆಚ್ಚ ರೂ.25.000/- ಮಿತಿಯೊಳಗೆ ಇರಬೇಕು.

**ವೆಚ್ಚದ ಮಿತಿಯ ಘಟಕವಾರು ವಿವರಗಳು:**

| | |
|---|---|
| 1. ಊಟ, ಟೀ ಇತ್ಯಾದಿ 5 ದಿವಸಗಳಿಗೆ(ರೂ. 100 X 30 X 5) | ರೂ. 15000/- |
| 2. ಗೌರವ ಧನ (ಪ್ರತಿ ಉಪನ್ಯಾಸಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ 3 ಉಪನ್ಯಾಸ) | ರೂ. 2400/- |
| 3. ತರಬೇತಿ ಸಾಮಗ್ರಿಗಳು | ರೂ. 2600/- |
| 4. ಸಾದಿಲ್ವಾರು ವೆಚ್ಚ | ರೂ. 1000/- |
| 5. ಕ್ಷೇತ್ರ ಭೇಟಿ | ರೂ. 4000/- |

***ವಿಸ್ತರಣಾ ಚಟುವಟಿಕೆಗಳು:***

**1. ಹಂಗಾಮು ಪೂರ್ವ ತರಬೇತಿ:** ಇದು ಒಂದು ದಿವಸದ ತರಬೇತಿಯಾಗಿದ್ದು, ರೈತ ಮಹಿಳೆಯರಿಗೆ ಕೌಶಲ್ಯ ಕಲಿಕೆಗಾಗಿ ಪದ್ಧತಿ ಪ್ರಾತ್ಯಕ್ಷತೆಯನ್ನು ಏರ್ಪಡಿಸಬೇಕು. ಒಂದು ತರಬೇತಿಗೆ ರೂ. 500/- ವೆಚ್ಚದ ಮಿತಿಯಿದ್ದು ವೆಚ್ಚದ ವಿವರಗಳು ಇಂತಿವೆ.

| | |
|---|---|
| 1. ಪರಿಕರಗಳು | ರೂ. 180/- |
| 2. ತರಬೇತಿ ಸಾಮಗ್ರಿಗಳು | ರೂ. 140/- |
| 3. ಲಘು ಉಪಹಾರ | ರೂ. 180/- |
| ಒಟ್ಟು | ರೂ. 500/- |

**2. ಸಮಗ್ರ ಫಲಿತಾಂಶ ಪ್ರಾತ್ಯಕ್ಷತೆ:** ಆಯ್ದ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷತೆಯನ್ನು ಏರ್ಪಡಿಸಲು ರೂ. 3000/- ಗಳ ಅವಕಾಶ ಕಲ್ಪಿಸಲಾಗಿದೆ. ನೀರಾವರಿಯಲ್ಲಿ 0.20 ಹೆಕ್ಟರ್ ಮತ್ತು ಖುಷ್ಕಿಯಲ್ಲಿ 0.40 ಹೆಕ್ಟರ್ ಪ್ರದೇಶದಲ್ಲಿ ಪ್ರಾತ್ಯಕ್ಷತೆ ಏರ್ಪಡಿಸಬೇಕು.

| | |
|---|---|
| 1. ಪರಿಕರಗಳು (ಬೀಜ, ರಸಗೊಬ್ಬರ, ಲಘು ಪೋಷಕಾಂಶ, ಕಳೆನಾಶಕ, ಸಸ್ಯ ಸಂರಕ್ಷಣಾ ಔಷಧಿ, ಇತ್ಯಾದಿ) | ರೂ. 2500/- |
| 2. ಸೂಚನಾ ಫಲಕ, ಇತ್ಯಾದಿ | ರೂ. 500/- |

**3. ರೈತ ಮಹಿಳೆಯರಿಗೆ ಅಧ್ಯಯನ ಪ್ರವಾಸ:** ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ರೈತ ಮಹಿಳೆಯರಿಗಾಗಿ ಅಧ್ಯಯನ ಪ್ರವಾಸವನ್ನು ಅರ್ಥ ಪೂರ್ಣವಾಗಿ ಏರ್ಪಡಿಸಲು ಕ್ರಮವಹಿಸಬೇಕು. ಒಂದು ದಿವಸದ ಈ ಕಾರ್ಯಕ್ರಮದಲ್ಲಿ ಹತ್ತಿರದಲ್ಲಿಯ ಸಂಶೋಧನಾ ಕೇಂದ್ರ, ಉತ್ತಮ ಕೃಷಿ ಕ್ಷೇತ್ರಗಳು, ಪ್ರಗತಿಪರ ಕೃಷಿಕರ ಜಮೀನುಗಳಿಗೆ ಪ್ರವಾಸ ಏರ್ಪಡಿಸಬೇಕು. ಪ್ರತಿ ತಂಡದಲ್ಲಿ 50 ರೈತ ಮಹಿಳೆಯರಿದ್ದು ಗರಿಷ್ಠ ರೂ.16000/- ವರೆಗೆ ವೆಚ್ಚ ಭರಿಸಬಹುದು. ಸಂವೇದನ ಶೀಲ ಮತ್ತು ಪ್ರಗತಿಪರ ಅಭ್ಯರ್ಥಿಗಳನ್ನು ಅಧ್ಯಯನ ಪ್ರವಾಸಕ್ಕೆ ಆಯ್ಕೆ ಮಾಡಬೇಕು. ಈ ಪ್ರವಾಸಕ್ಕೆ ಕಡ್ಡಾಯವಾಗಿ ತರಬೇತಿ ಹೊಂದಿರುವ ರೈತ ಮಹಿಳೆಯರನ್ನು ಆಯ್ಕೆ ಮಾಡಬೇಕೆಂಬ ನಿಬಂಧನೆಯನ್ನು ಪಾಲಿಸಬೇಕು.

**ವೆಚ್ಚದ ವಿವರಗಳು ಇಂತಿವೆಃ**

| | |
|---|---|
| 1. 50 ಜನ ರೈತ ಮಹಿಳೆಯರಿಗೆ ತಲಾ ರೂ. 100/- ರಂತೆ ದಿನಭತ್ಯೆ | ರೂ. 5000/- |
| 2. ಬಸ್ ಬಾಡಿಗೆ ಬಾಬ್ತು | ರೂ. 8500/- |
| 3. ಗ್ರಾಮದಿಂದ ಜಿಲ್ಲಾ ಸ್ಥಳಕ್ಕೆ ಬಂದು ಹೋಗುವ ವಾಸ್ತವಿಕ ಪ್ರಯಾಣ ವೆಚ್ಚ | ರೂ. 2500/- |
| 4. ಬ್ಯಾನರ್ ಇತ್ಯಾದಿ ಸಾದಿಲ್ವಾರು ವೆಚ್ಚ | ರೂ. 500/- |
| **ಒಟ್ಟು** | **ರೂ. 16500/-** |

**4. ಬೀಜ ಧನಃ** ಕ್ರಿಯಾ ಶೀಲ ರೈತ ಮಹಿಳೆಯರ ಗುಂಪುಗಳನ್ನು ಪ್ರೋತ್ಸಾಹಿಸಲು ಪ್ರತಿ ಗುಂಪಿಗೆ ಒಂದು ಸಲ ಮಾತ್ರ ರೂ. 5000/- ಸಹಾಯ ಧನವನ್ನು ನೀಡಬೇಕು. ಸದರಿ ಬಾಬ್ತನ್ನು ಗುಂಪಿನ ಬ್ಯಾಂಕ್ ಅಥವಾ ಅಂಚೆ ಕಛೇರಿ ಖಾತೆಯಲ್ಲಿ ಇಡಬೇಕು. ಮತ್ತು ಸದರಿ ಖಾತೆಯ ಮಾಹಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಇಟ್ಟುಕೊಳ್ಳಬೇಕು.ರೈತ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಬೀಜಧನ ನೀಡುವ ಸಂದರ್ಭದಲ್ಲಿ ಹಣ ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂಬುದರ ಕುರಿತು ಮುಚ್ಚಳಿಕೆ ಪತ್ರವನ್ನು ಪಡೆಯತಕ್ಕದ್ದು.

**5. ಪೈಲಟಿಂಗ್ ಅಗ್ರೊ ಎಂಟರ್ ಪ್ರೈಸಸ್ಃ** ರೈತ ಮಹಿಳೆಯರಲ್ಲಿ ಉದ್ಯಮ ಶೀಲತೆಯನ್ನು ಪ್ರೋತ್ಸಾಹಿಸಲು ಮತ್ತು ಕೃಷಿ ಹಾಗು ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ರೂ. 5000 - ರೂ. 50,000 ನೆರವು ನೀಡಲು ಅವಕಾಶ ಕಲ್ಪಿಸಲಾಗಿದೆ.

ಕೃಷಿ ಉತ್ಪಾದನೆ ಮತ್ತು ಮೌಲ್ಯ ವರ್ಧನೆಗಾಗಿ ಅಗ್ರೋ ಎಂಟರ್ ಪ್ರೈಸಸ್‌ಗಳನ್ನು ತೆಗೆದುಕೊಂಡು ರೈತ ಮಹಿಳೆಯರ ಗುಂಪು ಲಾಭವನ್ನು ಗಳಿಸುವಂತೆ ಮಾಡಬೇಕು. ಕಟಾವೋತ್ತರ ತಾಂತ್ರಿಕತೆ (ಒಣಗಿಸುವುದು, ಸಂಗ್ರಹಣೆ, ಸಂಸ್ಕರಣೆ, ಪ್ಯಾಕಿಂಗ್ ಇತ್ಯಾದಿ) ಮೌಲ್ಯವರ್ಧನೆ ಸಂಬಂಧಿತ ಚಟುವಟಿಕೆಗಳನ್ನು ಮಾರಾಟ ಪ್ರಕ್ರಿಯೆಗೆ ಪೂರಕವಾಗಿ ಕೈಗೊಳ್ಳಬೇಕು. ಆರ್ಥಿಕವಾಗಿ ಲಾಭದಾಯಕವಾಗುವಂತೆ ಯೋಜನೆಯನ್ನು ರೂಪಿಸಿ ಅಗತ್ಯ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವಂತೆ ಗುಂಪುಗಳಿಗೆ ಕೃಷಿ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳ ಮೂಲಕ ತಾಂತ್ರಿಕ ನೆರವು ನೀಡಬೇಕು.

ಸಕ್ರಿಯವಾಗಿ ಕಾರ್ಯನಿರ್ವಹಿಸುವ ಮತ್ತು ಆದಾಯ ಸೃಜನೆಗೆ ಉದ್ದೇಶಿಸಿರುವ ಎಲ್ಲಾ ರೈತ ಮಹಿಳೆಯರ ಗುಂಪುಗಳು ಈ ಘಟಕದಡಿ ನೆರವು ಪಡೆಯಲು ಅರ್ಹರಾಗಿರುತ್ತಾರೆ. ಈ ಘಟಕದಡಿ ಡ್ರೈಯಿಂಗ್ ತರಬೇತಿ, ಸಂಗ್ರಹಣೆ / ಮಾರಾಟ, ಬೀಜೋತ್ಪಾದನೆ, ಜೈವಿಕ ಗೊಬ್ಬರ / ಪೀಡೆ ನಾಶಕ ಉತ್ಪಾದನೆ, ನರ್ಸರಿ, ಸೈಲೇಜ್ ತಯಾರಿ, ಹೈನೋತ್ಪನ್ನಗಳ (ಖೋವ, ತುಪ್ಪ) ತಯಾರಿ, ಪಶು / ಕೋಳಿ ಆಹಾರ ತಯಾರಿ, ಕೃಷಿ ಯಂತ್ರೋಪಕರಣ (ಒಕ್ಕಣಿ ಯಂತ್ರ, ಡ್ರಂ ಸೀಡರ್, ನಾಟಿ ಯಂತ್ರ, ದಾಲ್‌ಮಿಲ್) ಗಳನ್ನು ಬಾಡಿಗೆಗೆ ಕೊಡುವುದು. ಗಿಡಮೂಲಿಕೆಗಳಿಂದ ಔಷಧಿ ತಯಾರಿ, ಅಗರ್ ಬತ್ತಿ ತಯಾರಿ, ಚಂದ್ರಿಕೆ ತಯಾರಿ ಇತ್ಯಾದಿ ಸ್ಥಳೀಯ ಉದ್ದಿಮೆಗಳನ್ನು ಈ ಘಟಕದಡಿ ಕೈಗೊಳ್ಳಬಹುದು.

**ಸಹಾಯ ಧನ ನೀಡಲು ಮಾನದಂಡಗಳುಃ**

1. ಸಕ್ರಿಯವಾಗಿ ಕಾರ್ಯನಿರ್ವಹಿಸುವ ಮತ್ತು ಆದಾಯ ಸೃಜನೆಗೆ ಉದ್ದೇಶಿಸಿರುವ ಎಲ್ಲಾ ರೈತ ಮಹಿಳೆಯರ ಗುಂಪುಗಳು ಈ ಘಟಕದಡಿ ನೆರವು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಉಪ ಗುಂಪುಗಳಿಗೆ ಅಥವಾ ವೈಯಕ್ತಿಕವಾಗಿ ಸೌಲಭ್ಯ ನೀಡಬಾರದು.
2. ಸದರಿ ನೆರವನ್ನು ಸುತ್ತು ನಿಧಿಯಾಗಿ ಬಳಸಿಕೊಳ್ಳಬೇಕು ಮತ್ತು ಗುಂಪು ನಿರ್ಣಯಿಸಿದಂತೆ ಮರು ಸಂದಾಯಕ್ಕೆ ಕ್ರಮ ವಹಿಸಬೇಕು.
3. ಜೇಷ್ಠತಾ ಅನುಸಾರವಾಗಿ ಗುಂಪುಗಳಿಂದ ಬಂದ ಅರ್ಜಿಗಳನ್ನು ಪರಿಗಣಿಸಬೇಕು.
4. ಸದರಿ ಸಹಾಯಧನವನ್ನು ಕೃಷಿ ಇಲಾಖೆಯ ಇತರೆ ಯೋಜನೆಗಳ ಅಡಿಯಲ್ಲಿ ಅಥವಾ ಇತರೆ ಇಲಾಖೆಗಳಿಂದ ನೀಡುವ ಸಹಾಯಧನಕ್ಕೆ ಪೂರಕವಾಗಿ ನೀಡುವ ಮೂಲಕ ಹೆಚ್ಚಿನ ಸಂಖ್ಯೆಯ ಗುಂಪುಗಳಿಗೆ ನೆರವು ಲಭಿಸುವಂತೆ ಕ್ರಮವಹಿಸುವುದು. ಇಂತಹ ಪ್ರಸಂಗಗಳಲ್ಲಿ ಶೇಕಡವಾರು ಗರಿಷ್ಟ ನೆರವಿನ ಪ್ರಮಾಣ 30 ಕ್ಕಿಂತ ಕಡಿಮೆ ಇದ್ದು ಗುಂಪುಗಳು ಕನಿಷ್ಟ ಶೇಕಡ 20 ರಷ್ಟು ತಮ್ಮ ಪಾಲಿನ ಹಣವನ್ನು ತೊಡಗಿಸಬೇಕು.
5. ರೈತ ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಕೃಷಿ ಉದ್ದಿಮೆ ನೀಡುವ ಸಂದರ್ಭದಲ್ಲಿ ಹಣ ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂಬುದರ ಕುರಿತು ಮುಚ್ಚಳಿಕೆ ಪತ್ರವನ್ನು ಪಡೆಯತಕ್ಕದ್ದು.

ಘಟಕದ / ಉದ್ದಿಮೆಯ / ಯೋಜನೆಯ ರೂಪರೇಷೆಗಳನ್ನು ನಬಾರ್ಡ್, ಹಾಪ್‌ಕಾಮ್ಸ್, ಸಂಶೋಧನಾ ಕೇಂದ್ರಗಳು, ಬ್ಯಾಂಕುಗಳು, ಸರ್ಕಾರೇತರ ಸಂಸ್ಥೆಗಳ ಮತ್ತು ಇಲಾಖೆಯ ವಿಸ್ತರಣಾ ಸಿಬ್ಬಂದಿ ಮತ್ತು ಅಧಿಕಾರಿಗಳ ಸಲಹೆಯೊಂದಿಗೆ ತಯಾರಿಸಬೇಕು. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವ ಮೂಲಕ ಅನುದಾನ ಸಂದಾಯಕ್ಕೆ ಅನುಮತಿಸುವುದು. ಸದರಿ ಅನುದಾನವನ್ನು ಪಡೆದ ನಂತರ ಗುಂಪಿನ ನಿರ್ಣಯದಂತೆ ವೆಚ್ಚ ಭರಿಸಬೇಕು. ಅಗತ್ಯ ಪರಿಕರ / ಉಪಕರಣಗಳನ್ನು ಖರೀದಿಸುವಾಗ ಗುಂಪಿನ ನಿರ್ಧಾರವೆ ಅಂತಿಮವಾಗಿರುತ್ತದೆ. ಸರ್ಕಾರದ ಖರೀದಿ ನಿಯಮಗಳು ಈ ಕುರಿತು ಅನ್ವಯಿಸುವುದಿಲ್ಲ. ಸಹಾಯ ಅನುದಾನ ಪಡೆದ ನಂತರ ಲೆಕ್ಕ ಪತ್ರದ ವಿವರಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪ್ರತಿ ತ್ರೈಮಾಸಿಕಕ್ಕೊಮ್ಮೆ ಪರಿಶೀಲಿಸಲು ಕ್ರಮ ಕೈಗೊಳ್ಳಬೇಕು.

**ರೈತ ಮಹಿಳೆಯರ ತರಬೇತಿ ಚಟುವಟಿಕೆಗಳು:**

**6.ಸಂಸ್ಥಾ ತರಬೇತಿ:** ರೈತ ಮಹಿಳೆಯರಿಗೆ ಕೃಷಿ ತಾಂತ್ರಿಕತೆ ಮಟ್ಟವನ್ನು ಸುಧಾರಿಸಲು ಮತ್ತು ತಮ್ಮ ಕೃಷಿಯಲ್ಲಿ ನಿರ್ಧಾರ ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲು ಸಂಸ್ಥಾ ತರಬೇತಿಗಳನ್ನು ಏರ್ಪಡಿಸಲಾಗುತ್ತದೆ. ಆಯ್ದ ರೈತ ಸಂಪರ್ಕ ಕೇಂದ್ರದ ಗುಚ್ಛ ಗ್ರಾಮಗಳಿಂದ ರೈತ ಮಹಿಳೆಯರಿಗೆ ಕೃಷಿ ಉತ್ಪಾದನಾ ತಾಂತ್ರಿಕತೆ ಸಂಬಂಧಿತ ಕೌಶಲ್ಯ ಕಲಿಕೆ ಕುರಿತಂತೆ ತರಬೇತಿಗಳನ್ನು ಏರ್ಪಡಿಸಬೇಕು. ಸ್ವಸಹಾಯ ಗುಂಪುಗಳಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ತರಬೇತಿಗಳನ್ನು ರೂಪಿಸಬೇಕು. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡಬೇಕು. ತರಬೇತಿಗೆ 18 ರಿಂದ 50 ವಯೋಮಾನದ ರೈತ ಮಹಿಳೆಯರನ್ನು ಆಯ್ಕೆ ಮಾಡಬೇಕು.

ತರಬೇತಿಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಒಬ್ಬ ಅಧಿಕಾರಿಯು ಕಡ್ಡಾಯವಾಗಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುವುದು. ಅಧಿಕಾರಿಗಳ ಲಭ್ಯತೆ ಇಲ್ಲದಿದ್ದಲ್ಲಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸೂಚಿಸಿದ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿ ತರಬೇತಿಯ ಬಗ್ಗೆ ಧೃಡೀಕರಣ ಪತ್ರವನ್ನು ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

| ಕ್ರ. ಸಂ. | ವಿವರ | ರೈತ ಸಂಪರ್ಕ ಕೇಂದ್ರ | ಷರಾ |
|---|---|---|---|
| 1 | ತರಬೇತಿಯ ಅವಧಿ | 4 ದಿವಸ | |
| 2 | **ಪ್ರತಿ ತರಬೇತಿಯ ಘಟಕ ವೆಚ್ಚ**<br>• ದಿನಭತ್ಯೆ - ಪ್ರತಿ ದಿವಸ ತಲಾ ರೂ.100 ರಂತೆ<br>• ವಾಸ್ತವಿಕ ಪ್ರಯಾಣ ವೆಚ್ಚ/ವಾಹನ ಇಂದನ ವೆಚ್ಚ<br>• ಲೇಖನ ಸಾಮಗ್ರಿ, ಅತಿಥಿ ಉಪನ್ಯಾಸಕರಿಗೆ ಗೌರವ ಧನ (ಪ್ರತಿ ಉಪನ್ಯಾಸಕಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ ಮೂರು ಉಪನ್ಯಾಸಗಳು)ಮತ್ತು ಪ್ರಯಾಣ ವೆಚ್ಚ, ತರಬೇತಿ ಸಾಮಗ್ರಿ, ಇಂಧನ ವೆಚ್ಚ. | ರೂ. 18000/-<br>ರೂ. 12000/-<br>ರೂ. 4000/-<br>ರೂ. 2000/- | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳು, ಭಿತ್ತಿ ಪತ್ರಗಳು, ದೃಶ್ಯಶ್ರವಣ ಸಾಧನೆಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. ಸಾಧ್ಯವಾದಷ್ಟು ಕ್ಷೇತ್ರ ಭೇಟಿ ಮತ್ತು ಕೌಶಲ್ಯ ಕಲಿಕೆಗೆ ಅವಕಾಶ ನೀಡಬೇಕು. |
| 3 | ಅಭ್ಯರ್ಥಿಗಳ ಸಂಖ್ಯೆ | 30 | |

**7. ಸಂಪರ್ಕ ಕಾರ್ಯಕರ್ತೆಯರ ತರಬೇತಿ:** ಇಲಾಖೆಯ ಮತ್ತು ರೈತ ಮಹಿಳೆಯರ ಗುಂಪುಗಳ ನಡುವೆ ಸಂಪರ್ಕ ಕಾರ್ಯಕರ್ತರಾಗಿಸುವಂತೆ ರೂಪಿಸಲು ತರಬೇತಿ ಪಡೆದ ರೈತ ಮಹಿಳೆಯರಿಗೆ ಈ ತರಬೇತಿಗಳನ್ನು ಏರ್ಪಡಿಸಲಾಗುತ್ತದೆ. ಸ್ವಸಹಾಯ ಗುಂಪುಗಳ ಮೂಲಕ ಸೌಲಭ್ಯ ಪಡೆಯುವುದು ಮತ್ತು ಮಹಿಳೆಯರಿಗೆ ದೊರಕುವ ಸೌಲಭ್ಯಗಳು ಮತ್ತು ಅವರಿಗೆ ಸಂಬಂಧಿತ ಸರ್ಕಾರದ ನೀತಿಗಳ ಬಗ್ಗೆ ತರಬೇತಿಗಳಲ್ಲಿ ಮಾಹಿತಿ ನೀಡಬೇಕು. ವಿಶೇಷ ಸಂಪರ್ಕ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುವಂತೆ ಸಹ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬೇಕು. **ಈ ತರಬೇತಿಯನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ನಡೆಸುವುದು.**

ಈ ಮೊದಲೇ ಸಾಂಸ್ಥಿಕ ತರಬೇತಿ ಪಡೆದ ಸಕ್ರಿಯವಾಗಿ ವಿಸ್ತರಣಾ ಕಾರ್ಯಗಳಲ್ಲಿ ಭಾಗವಹಿಸುವ ರೈತ ಮಹಿಳೆಯರ ಸ್ವಸಹಾಯ ಗುಂಪುಗಳ ಮುಂದಾಳುಗಳನ್ನು ಈ ತರಬೇತಿಗೆ ಆಯ್ಕೆ ಮಾಡಬೇಕು. ಅಭ್ಯರ್ಥಿಗಳು ಗುಂಪು ರಚನೆ ಚಟುವಟಿಕೆ ಬಗ್ಗೆ ಆಸಕ್ತಿಯೊಂದಿಗೆ ಪರರಿಗೆ ನೆರವು ನೀಡುವ ಮತ್ತು ಪ್ರೋತ್ಸಾಹಿಸುವ ಮನೋಭಾವ ಹೊಂದಿರಬೇಕು. ಪ್ರತಿ ಗ್ರಾಮದಿಂದ 2-3 ಸಂಪರ್ಕ ಕಾರ್ಯಕರ್ತೆಯರಂತೆ 30 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ವೆಚ್ಚದ ವಿವರಗಳು ಇಂತಿವೆಃ

| **ಕ್ರ.ಸಂ.** | **ವಿವರ** | **ಜಿಲ್ಲಾ ಕೃಷಿ ತರಬೇತಿ ಕೇಂದ್ರ** | **ಷರಾ** |
|---|---|---|---|
| 1 | ತರಬೇತಿಯ ಅವಧಿ | 3 ದಿವಸ | |
| 2 | **ಪ್ರತಿ ತರಬೇತಿಯ ಘಟಕ ವೆಚ್ಚ**<br>• ದಿನಭತ್ಯೆ - ಪ್ರತಿ ದಿವಸ ತಲಾ ರೂ. 100 ರಂತೆ<br>• ವಾಸ್ತವಿಕ ಪ್ರಯಾಣ ವೆಚ್ಚ<br>• ಲೇಖನ ಸಾಮಗ್ರಿ, ಅತಿಥಿ ಉಪನ್ಯಾಸಕರಿಗೆ ಗೌರವ ಧನ (ಪ್ರತಿ ಉಪನ್ಯಾಸಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ ಮೂರು ಉಪನ್ಯಾಸಗಳು)ಮತ್ತು ಪ್ರಯಾಣ ವೆಚ್ಚ, ತರಬೇತಿ ಸಾಮಗ್ರಿ, ಇಂಧನ ವೆಚ್ಚ. | ರೂ. 14500/-<br>ರೂ. 9000/-<br>ರೂ. 3500/-<br>ರೂ. 2000/- | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳು, ಭಿತ್ತಿ ಪತ್ರಗಳು, ದೃಶ್ಶ್ರವಣ ಸಾಧನಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. ಸಾಧ್ಯವಾದಷ್ಟು ಕ್ಷೇತ್ರ ಭೇಟಿ ಮತ್ತು ಕೌಶಲ್ಯ ಕಲಿಕೆಗೆ ಅವಕಾಶ ನೀಡಬೇಕು. |
| 3 | ಅಭ್ಯರ್ಥಿಗಳ ಸಂಖ್ಯೆ | 30 | |

**8.ವಿಶೇಷ ತರಬೇತಿಃ** ಕೃಷಿ ಉದ್ಯಮಗಳು ಸೇರಿದಂತೆ ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ ಮತ್ತು ಪಶುಸಂಗೋಪನೆ ಕುರಿತು ವಿಶೇಷ ತರಬೇತಿಗಳನ್ನು ಐದು ದಿವಸಗಳ ಅವಧಿಗೆ ತಲಾ 30 ಅಭ್ಯರ್ಥಿಗಳ ತಂಡಗಳಿಗೆ ಏರ್ಪಡಿಸಬೇಕು. ಸದರಿ ತರಬೇತಿಯನ್ನು ಕಡ್ಡಾಯವಾಗಿ ತಮ್ಮ ಜಿಲ್ಲೆಯ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಅಥವಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸುವುದು. ವಿಶೇಷ ತರಬೇತಿಗಳಿಗೆ ಆಯ್ಕೆ ಮಾಡುವಾಗ ಶೇಕಡ ೭೫ದರಷ್ಟು ರೈತ ಮಹಿಳೆಯರ ಉಪ ಕಸುಬುಗಳಾದ ತೋಟಗಾರಿಕೆ, ಹೈನುಗಾರಿಕೆ, ರೇಷ್ಮೆ ಕೃಷಿಗಳಲ್ಲಿ ತೊಡಗಿರಬೇಕು ಮತ್ತು ಕನಿಷ್ಠ ಶೇಕಡ ೨೫ರಷ್ಟು ತರಬೇತಿಯಿಂದ ಪ್ರಯೋಜನ ಪಡೆದು ಮುಂದೆ ಕಸುಬಿನಲ್ಲಿ ತೊಡಗಿಸಿಕೊಳ್ಳುವವರನ್ನು ಆಯ್ಕೆ ಮಾಡಬೇಕು.

**ವೆಚ್ಚದ ವಿವರಗಳು ಇಂತಿವೆಃ**

| ಕ್ರ.ಸಂ | ವಿವರ | ಘಟಕವಾರು ವೆಚ್ಚ | ಷರಾ |
|---|---|---|---|
| 1 | ತರಬೇತಿಯ ಅವಧಿ | 5 ದಿವಸ | |
| 2 | • ದಿನಭತ್ಯೆ - ಪ್ರತಿ ದಿವಸ ತಲಾ ರೂ. 100 ರಂತೆ<br>• ವಾಸ್ತವಿಕ ಪ್ರಯಾಣ ವೆಚ್ಚ/ವಾಹನ ಇಂದನ ವೆಚ್ಚ<br>• ಅತಿಥಿ ಉಪನ್ಯಾಸಕರಿಗೆ ಗೌರವ ಧನ (ಪ್ರತಿ ಉಪನ್ಯಾಸಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ ಮೂರು ಉಪನ್ಯಾಸಗಳು)<br>• ತರಬೇತಿ ಸಾಮಗ್ರಿಗಳು<br>• ಕ್ಷೇತ್ರ ಭೇಟಿ (ವಾಹನ ಬಾಡಿಗೆ ಶುಲ್ಕ)<br>ಲೇಖನಾ ಸಾಮಗ್ರಿ ಮತ್ತು ತರಬೇತಿ ಕೈಪಿಡಿ<br>ಒಟ್ಟು | ರೂ. 15000/-<br>ರೂ. 3000/-<br>ರೂ. 3000/-<br><br>ರೂ. 2000/-<br>ರೂ. 4000/-<br>ರೂ. 2000/-<br>ರೂ. 29000/- | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳು, ಭಿತ್ತಿ ಪತ್ರಗಳು, ದೃಶ್ಶ್ರವಣ ಸಾಧನೆಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. ಸಾಧ್ಯವಾದಷ್ಟು ಕ್ಷೇತ್ರ ಭೇಟಿ ಮತ್ತು ಕೌಶಲ್ಯ ಕಲಿಕೆಗೆ ಅವಕಾಶ ನೀಡಬೇಕು. |
| 3 | ಅಭ್ಯರ್ಥಿಗಳ ಸಂಖ್ಯೆ | 30 | |

**ಸೂಕ್ತ ತಾಂತ್ರಿಕತೆಗಳ ಅಭಿವೃದ್ಧಿಃ**

**9. ಜಿಲ್ಲಾ ತಾಂತ್ರಿಕ ಸಮಾವೇಶಃ** ತರಬೇತಿ ಪಡೆದ ರೈತ ಮಹಿಳೆಯರ ಪೈಕಿ ಆಯ್ದ ಸಂಪರ್ಕ ಕಾರ್ಯಕರ್ತೆಯರಿಗೆ ಜಿಲ್ಲಾಮಟ್ಟದಲ್ಲಿ ಪ್ರತಿ ತಾಲ್ಲೂಕಿಗೆ 5-6 ರಂತೆ ಮತ್ತು ಮಹಿಳಾ ಮತ್ತು ಪುರುಷ ವಿಸ್ತರಣಾಧಿಕಾರಿಗಳು ಒಂದೆಡೆ ಸೇರಲು ಅವಕಾಶ ಕಲ್ಪಿಸುವುದರೊಂದಿಗೆ ತಾಂತ್ರಿಕ, ಗುಂಪು ಚಟುವಟಿಕೆಗಳ ಸಾಧನೆಗಳು ಮತ್ತು ರೈತ ಮಹಿಳಾ ವಿಸ್ತರಣೆ ಕುರಿತ ಸಾಧಕ ಬಾಧಕಗಳ ಬಗ್ಗೆ ವಿಚಾರ ವಿನಿಮಯಕ್ಕೆ ವೇದಿಕೆ ಒದಗಿಸುವುದು ಈ ಸಮಾವೇಶದ ಉದ್ದೇಶವಾಗಿದೆ.

**ವೆಚ್ಚದ ವಿವರಗಳು ಇಂತಿವೆಃ**

| ಕ್ರ.ಸಂ. | ವಿವರ | | ಷರಾ |
|---|---|---|---|
| 1 | ಸಮಾವೇಶದ ಅವಧಿ | 1 ದಿವಸ | |
| 2 | • ಪ್ರತಿ ತರಬೇತಿಯ ಘಟಕ ವೆಚ್ಚ<br>• ಊಟದ ವೆಚ್ಚ - ಪ್ರತಿಯೊಬ್ಬರಿಗೆ ತಲಾ ರೂ. 100 ರಂತೆ<br>• ವಾಸ್ತವಿಕ ಪ್ರಯಾಣ ವೆಚ್ಚ/ವಾಹನ ಇಂಧನ ವೆಚ್ಚ<br>• ಸಭಾಂಗಣದ ಬಾಡಿಗೆ, ಇತರೆ ವೆಚ್ಚ<br>• ಅತಿಥಿ ಉಪನ್ಯಾಸಕರಿಗೆ ಗೌರವ ಧನ (ಪ್ರತಿ ಉಪನ್ಯಾಸಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ ಮೂರು ಉಪನ್ಯಾಸಗಳು)<br>• ತರಬೇತಿ ಸಾಮಗ್ರಿಗಳು<br>• ತರಬೇತಿ ಕಿಟ್<br>• ಇತರೆ ವೆಚ್ಚ<br>**ಒಟ್ಟು** | <br>ರೂ. 5000/-<br>ರೂ. 5000/-<br>ರೂ. 4000/-<br>ರೂ.2000/-<br><br>ರೂ. 2000/-<br>ರೂ. 6000/-<br>ರೂ. 1000/-<br>**ರೂ. 25000/-** | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳು, ಭಿತ್ತಿ ಪತ್ರಗಳು, ದೃಶ್ಶ್ರವಣ ಸಾಧನೆಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. |

**10. ರಾಜ್ಯ ಮಟ್ಟದ ತಾಂತ್ರಿಕ ಸಮಾವೇಶಃ** ತರಬೇತಿ ಪಡೆದ ರೈತ ಮಹಿಳೆಯರ ಪೈಕಿ ಆಯ್ದ ಸಂಪರ್ಕ ಕಾರ್ಯಕರ್ತೆಯರಿಗೆ ರಾಜ್ಯ ಮಟ್ಟದಲ್ಲಿ ಪ್ರತಿ ತಾಲ್ಲೂಕಿಗೆ ಇಬ್ಬರಂತೆ ಮತ್ತು ಮಹಿಳಾ ಮತ್ತು ಪುರುಷ ವಿಸ್ತರಣಾಧಿಕಾರಿಗಳು ಒಂದೆಡೆ ಸೇರಲು ಅವಕಾಶ ಕಲ್ಪಿಸುವುದರೊಂದಿಗೆ ತಾಂತ್ರಿಕ, ಗುಂಪು ಚಟುವಟಿಕೆಗಳ ಸಾಧನೆಗಳ ಮತ್ತು ರೈತ ಮಹಿಳಾ ವಿಸ್ತರಣೆ ಕುರಿತ ಸಾಧಕ ಬಾಧಕಗಳ ಬಗ್ಗೆ ವಿಚಾರ ವಿನಿಮಯಕ್ಕೆ ವೇದಿಕೆ ಒದಗಿಸುವುದು ಈ ಸಮಾವೇಶದ ಉದ್ದೇಶವಾಗಿದೆ.

**ವೆಚ್ಚದ ವಿವರಗಳು ಇಂತಿವೆಃ**

| ಕ್ರ.ಸಂ | ವಿವರ | | ಷರಾ |
|---|---|---|---|
| 1 | ಸಮಾವೇಶದ ಅವಧಿ | 2 ದಿವಸ | |
| 2 | • ಪ್ರತಿ ತರಬೇತಿಯ ಘಟಕ ವೆಚ್ಚ<br>• ಊಟದ ವೆಚ್ಚ - ಪ್ರತಿಯೊಬ್ಬರಿಗೆ ತಲಾ ರೂ. 100 ರಂತೆ<br>• ವಾಸ್ತವಿಕ ಪ್ರಯಾಣ ವೆಚ್ಚ/ವಾಹನ ಇಂಧನ ವೆಚ್ಚ<br>• ಸಭಾಂಗಣದ ಬಾಡಿಗೆ, ಇತರೆ ವೆಚ್ಚ<br>• ಅತಿಥಿ ಉಪನ್ಯಾಸಕರಿಗೆ ಗೌರವ ಧನ (ಪ್ರತಿ ಉಪನ್ಯಾಸಕ್ಕೆ ರೂ. 200, ಪ್ರತಿ ದಿವಸ ಗರಿಷ್ಠ ಮೂರು ಉಪನ್ಯಾಸಗಳು)<br>• ಅತಿಥಿ ಉಪನ್ಯಾಸಕರಿಗೆ ಪ್ರವಾಸ ಭತ್ಯೆ<br>• ತರಬೇತಿ ಸಾಮಗ್ರಿಗಳು<br>• ತರಬೇತಿ ಕಿಟ್<br>• ಇತರೆ ವೆಚ್ಚ<br>**ಒಟ್ಟು** | **ರೂ. 700000/-** | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳು, ಭಿತ್ತಿ ಪತ್ರಗಳು, ದೃಶ್ಶ್ರವಣ ಸಾಧನೆಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. |

**ಸೂಚನೆಃ**

- ತರಬೇತಿ ಕಾರ್ಯಕ್ರಮಗಳಾದ ರೈತ ಮಹಿಳೆಯರ ಅಧ್ಯಯನ ಪ್ರವಾಸ, ವಿಶೇಷ ತರಬೇತಿ, ಸಂಸ್ಥಾ ತರಬೇತಿ, ಸಂಪರ್ಕ ಕಾರ್ಯಕರ್ತೆಯರ ತರಬೇತಿ, ಜಿಲ್ಲಾ ಮಟ್ಟದ ತಾಂತ್ರಿಕ ಸಮಾವೇಶ ಹಾಗೂ ರಾಜ್ಯ ಮಟ್ಟದ ತಾಂತ್ರಿಕ ಸಮಾವೇಶ ಘಟಕಗಳನ್ನು ಅನುಷ್ಠಾನಗೊಳಿಸುವಲ್ಲಿ

- ಪ್ರತಿ ತರಬೇತಿ / ಸಮಾವೇಶಕ್ಕೆ ಮಿತಿಗೊಳಿಸಿದ ಘಟಕ ವೆಚ್ಚವನ್ನು ಮೀರದಂತೆ ದಿನಭತ್ಯೆ ಹೊರತು ಇತರ ಚಟುವಟಿಕೆಗಳಿಗೆ ಒದಗಿಸಲಾದ ಅನುದಾನದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಅದೇ ತರಬೇತಿಗೆ / ಸಮಾವೇಶಕ್ಕೆ ಸಂಬಂಧಿಸಿದ ಬಾಬ್ತುಗಳಿಗಾಗಿ ವೆಚ್ಚ ಭರಿಸಲು (ಅಂದರೆ ಪ್ರಯಾಣ ವೆಚ್ಚ, ಸಭಾಂಗಣದ ಬಾಡಿಗೆ, ಅತಿಥಿ ಉಪನ್ಯಾಸಕರಿಗೆ ಗೌರವ ಧನ ಮತ್ತು ಪ್ರವಾಸ ಭತ್ಯೆ, ತರಬೇತಿ ಸಾಮಗ್ರಿಗಳು, ತರಬೇತಿ ಕಿಟ್ ಮತ್ತು ಇತರೆ ವೆಚ್ಚಗಳು ಮುಂತಾದ ಚಟುವಟಿಕೆಗಳ ಪೈಕಿ ಕೆಲವು ಚಟುವಟಿಕೆಗಳಿಗೆ ನೀಡಿದ ಅನುದಾನದಲ್ಲಿ ಉಳಿತಾಯವಾಗುವ ಬಾಬ್ತನ್ನು ಅದೇ ತರಬೇತಿ / ಸಮಾವೇಶಕ್ಕೆ ಸಂಬಂಧಿಸಿದ ಇತರೆ ಅಗತ್ಯ ಚಟುವಟಿಕೆಗಳಿಗೆ ವೆಚ್ಚ ಭರಿಸಲು ) ಅನುಮತಿಸಿದೆ.

- ಯಾವುದೇ ತರಬೇತಿ / ಸಮಾವೇಶದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಪ್ರಥಮ ಬಾರಿಗೆ ಅಂತಹ ತರಬೇತಿಗಳಲ್ಲಿ ಭಾಗವಹಿಸುವಂತವರಾಗಿರಬೇಕು.

**ಕಾರ್ಯಾಚರಣೆ ವೆಚ್ಚಃ**

**11. ಸಿಬ್ಬಂದಿ ವೇತನ ಃ** ವೈಟಪ್ ಕಾರ್ಯಕ್ರಮದಡಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಅಧಿಕಾರಿ(ರೈತ ಮಹಿಳೆ) ಮತ್ತು ಸಿಬ್ಬಂದಿ ನೌಕರರುಗಳ ವೇತನ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಭರಿಸುವುದು.

**12. ಪ್ರಯಾಣ ವೆಚ್ಚ ಃ** ವೈಟಪ್ ಕಾರ್ಯಕ್ರಮದಡಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಪ್ರವಾಸ ವೆಚ್ಚವನ್ನು ಭರಿಸುವುದು. ಪ್ರವಾಸ ಕೈಗೊಂಡ ಅಧಿಕಾರಿಗಳು ಮುಂದಿನ ಮಾಸದ 10ನೇ ತಾರೀಖಿನೊಳಗೆ ದಿನಚರಿಯನ್ನು ಅನುಮೋದನೆಗೆ ಸಲ್ಲಿಸದಿದ್ದಲ್ಲಿ ಅಂತಹ ವೆಚ್ಚ ಭರಿಸಲು ಅರ್ಹರಲ್ಲ ಹಾಗೂ ದಿನಚರಿಗಳನ್ನು ಮಾಸದ 15ನೇ ತಾರೀಖಿನೊಳಗೆ ಅನುಮೋದಿಸದಿದ್ದಲ್ಲಿ ನಿಯಂತ್ರಾಣಾಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.

**13. ಕಛೇರಿ ವೆಚ್ಚ / ವಿಸ್ತರಣಾ ಸಾಹಿತ್ಯ ಮತ್ತು ಪ್ರಚಾರ ವೆಚ್ಚ :** ವೈಟಪ್ ಕಾರ್ಯಕ್ರಮದಡಿ ತರಬೇತಿ ಮತ್ತು ಇತರೆ ಚಟುವಟಿಕೆಗಳನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಸಾಮಾನ್ಯ ವಿಸ್ತರಣಾ ವ್ಯವಸ್ಥೆಯ ಮೂಲಕ ಕೈಗೊಳ್ಳುತ್ತಿರುವುದರಿಂದ ಈ ಕುರಿತು ಕಛೇರಿ ಕಾರ್ಯ ನಿರ್ವಹಣೆಗಾಗಿ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ರೈತ ಸಂಪರ್ಕ ಕೇಂದ್ರಗಳಿಗೆ ಅಗತ್ಯವಾದ ಲೇಖನ ಸಾಮಗ್ರಿ ಮತ್ತು ಇತರೆ ಅಗತ್ಯ ಪರಿಕರಗಳನ್ನು ಪಡೆಯಲು ಕುರಿತ ವೆಚ್ಚಗಳನ್ನು ಭರಿಸುವುದು.

ರೈತ ಮಹಿಳೆಯರ ಸ್ವಸಹಾಯ ಸಂಘಗಳ ಸಾಧನೆಗಳ ಬಗ್ಗೆ ಛಾಯಚಿತ್ರ, ವಿಡಿಯೋ ಚಿತ್ರೀಕರಣ, Audio-Video CD ಗಳನ್ನು ತಯಾರಿಸಲು ಸಹಾ ಈ ಅನುದಾನ ಬಳಸಿಕೊಳ್ಳತಕ್ಕದ್ದು. ವೈಟಿಪ್ ಯೋಜನೆಯ ಕಾರ್ಯಕ್ರಮಗಳು ಹಾಗೂ ಯಶೋಗಾಥೆಗಳ ಒಳಪಟ್ಟಂತೆ ಒಂದು ಕೈಪಿಡಿಯನ್ನು ತಯಾರಿಸಿಕೊಳ್ಳಲು ಸಹಾ ಈ ಅನುದಾನವನ್ನು ಬಳಸಿಕೊಳ್ಳುವುದು.

**14. ಕಟ್ಟಡಗಳ ನಿರ್ವಹಣೆ /ವಾಹನ ನಿರ್ವಹಣೆ ಮತ್ತು ಬಾಡಿಗೆ :** ತರಬೇತಿ ಸ್ಥಳಗಳ ಕಟ್ಟಡಗಳ ನಿರ್ವಹಣೆ ಮತ್ತು ಕಾಮಗಾರಿ ಸಂಬಂಧಿತ ಇತರೆ ಅಗತ್ಯ ವೆಚ್ಚಗಳನ್ನು ಭರಿಸುವುದು. ವೈಟಪ್ ಚಟುವಟಿಕೆಗಳಿಗಾಗಿ ಬಳಸುವ ಕಛೇರಿ ವಾಹನಗಳ ಇಂಧನ ಮತ್ತು ನಿರ್ವಹಣಾ ವೆಚ್ಚಗಳನ್ನು ಭರಿಸಲು ಮತ್ತು ಬಾಡಿಗೆ ವಾಹನವನ್ನು ಅಗತ್ಯಾನುಸಾರ ಪಡೆದು ಬಾಡಿಗೆ ಸಂದಾಯ ಮಾಡಲು ಈ ಘಟಕದಡಿ ಅವಕಾಶ ಕಲ್ಪಿಸಿದೆ.

**ವಿಶೇಷ ಸೂಚನೆ :**

- 2009-10ನೇ ಸಾಲಿಗೆ ವೈಟೆಪ್ ಯೋಜನೆಯಲ್ಲಿ ವಿಸ್ತರಣಾ ಚಟುವಟಿಕಗಳಿಗೆ ಆಯ್ಕೆ ಮಾಡುವ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅತೀ ಹಿಂದುಳಿದ ಗ್ರಾಮಗಳಿಗೆ ಹೆಚ್ಚಿನ ಆದ್ಯತೆಯ ಮೇಲೆ ಆಯ್ಕೆ ಮಾಡುವುದು.
- ಯೋಜನೆಯ ಎಲ್ಲಾ ಘಟಕಗಳಲ್ಲಿ ವಿಸ್ತರಣಾ ಚಟುವಟಿಕಗಳಿಗೆ ಒಟ್ಟು ಫಲಾನುಭವಿಗಳಲ್ಲಿ ನಿಯಮಾನುಸಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಿಡುವುದು.

**2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಆರ್ಥಿಕ ಕಾರ್ಯಕ್ರಮ**

**ಲೆಕ್ಕ ಶೀರ್ಷಿಕೆ 2401-00-109-0-80 (ಯೋಜನೇತರ)**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಜಿಲ್ಲೆ | ಹಂಗಾಮು ಪೂರ್ವ ತರಬೇತಿ | | ಸಮಗ್ರ ಫಲಿತಾಂತ ಪ್ರಾತ್ಯಕ್ಷತೆ | | ರೈತ ಮಹಿಳೆಯರ ಅಧ್ಯಯನ ಪ್ರವಾಸ | | ಬೀಜ ಧನ | |
|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬೆಂಗಳೂರು (ನ) | 40 | 0.20 | 15 | 0.45 | 4 | 0.66 | 36 | 1.80 |
| 2 | ಬೆಂಗಳೂರು (ಗ್ರಾ) | 45 | 0.23 | 15 | 0.45 | 4 | 0.66 | 36 | 1.80 |
| 3 | ರಾಮನಗರ | 45 | 0.23 | 15 | 0.45 | 4 | 0.66 | 36 | 1.80 |
| 4 | ಕೋಲಾರ | 50 | 0.25 | 18 | 0.54 | 4 | 0.66 | 45 | 2.25 |
| 5 | ಚಿಕ್ಕಬಳ್ಳಾಪುರ | 60 | 0.30 | 18 | 0.54 | 4 | 0.66 | 54 | 2.70 |
| 6 | ತುಮಕೂರು | 120 | 0.60 | 35 | 1.05 | 7 | 1.16 | 100 | 5.00 |
| 7 | ಶಿವಮೊಗ್ಗ | 100 | 0.50 | 26 | 0.78 | 6 | 0.99 | 65 | 3.25 |
| 8 | ಚಿತ್ರದುರ್ಗ | 90 | 0.45 | 24 | 0.72 | 6 | 0.99 | 54 | 2.70 |
| 9 | ದಾವಣಗೆರೆ | 70 | 0.35 | 24 | 0.72 | 6 | 0.99 | 54 | 2.70 |
| 10 | ಮೈಸೂರು | 70 | 0.35 | 26 | 0.78 | 6 | 0.99 | 65 | 3.25 |
| 11 | ಚಾಮರಾಜನಗರ | 40 | 0.20 | 16 | 0.48 | 3 | 0.50 | 36 | 1.80 |
| 12 | ಮಂಡ್ಯ | 70 | 0.35 | 26 | 0.78 | 6 | 0.99 | 63 | 3.15 |
| 13 | ಕೊಡಗು | 40 | 0.20 | 14 | 0.42 | 3 | 0.50 | 27 | 1.35 |
| 14 | ಹಾಸನ | 110 | 0.55 | 30 | 0.9 | 6 | 0.99 | 72 | 3.60 |
| 15 | ಚಿಕ್ಕಮಗಳೂರು | 100 | 0.50 | 26 | 0.78 | 6 | 0.99 | 63 | 3.15 |
| 16 | ದಕ್ಷಿಣ ಕನ್ನಡ | 50 | 0.25 | 20 | 0.6 | 4 | 0.66 | 45 | 2.25 |
| 17 | ಉಡುಪಿ | 30 | 0.15 | 14 | 0.42 | 2 | 0.33 | 27 | 1.35 |
| 18 | ಧಾರವಾಡ | 50 | 0.25 | 20 | 0.6 | 5 | 0.83 | 45 | 2.25 |
| 19 | ಗದಗ | 50 | 0.25 | 20 | 0.6 | 5 | 0.83 | 45 | 2.25 |
| 20 | ಹಾವೇರಿ | 70 | 0.35 | 26 | 0.78 | 5 | 0.83 | 63 | 3.15 |
| 21 | ಉತ್ತರ ಕನ್ನಡ | 110 | 0.55 | 40 | 1.2 | 7 | 1.16 | 100 | 5.00 |
| 22 | ಬೆಳಗಾವಿ | 150 | 0.75 | 38 | 1.14 | 7 | 1.16 | 100 | 5.00 |
| 23 | ವಿಜಾಪುರ | 50 | 0.25 | 20 | 0.6 | 4 | 0.66 | 45 | 2.25 |
| 24 | ಬಾಗಲಕೋಟೆ | 60 | 0.30 | 20 | 0.6 | 4 | 0.66 | 54 | 2.70 |
| 25 | ರಾಯಚೂರು | 50 | 0.25 | 20 | 0.6 | 4 | 0.66 | 45 | 2.25 |
| 26 | ಕೊಪ್ಪಳ | 40 | 0.20 | 16 | 0.48 | 4 | 0.66 | 40 | 2.00 |
| 27 | ಬಳ್ಳಾರಿ | 70 | 0.35 | 26 | 0.78 | 4 | 0.66 | 65 | 3.25 |
| 28 | ಗುಲ್ಬರ್ಗಾ | 120 | 0.60 | 40 | 1.2 | 7 | 1.16 | 100 | 5.00 |
| 29 | ಬೀದರ್ | 50 | 0.25 | 18 | 0.54 | 4 | 0.66 | 45 | 2.25 |
| | **ಕೇಂದ್ರ ಕಛೇರಿ** | **0** | **0.00** | **0** | **0.02** | **0** | **0.00** | **0** | **0.00** |
| | **ಒಟ್ಟು** | **2000** | **10.00** | **666** | **20.00** | **141** | **23.27** | **1625** | **81.25** |

**2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಆರ್ಥಿಕ ಕಾರ್ಯಕ್ರಮ**

**ಲೆಕ್ಕ ಶೀರ್ಷಿಕೆ 2401-00-109-0-80(ಯೋಜನೇತರ)** (ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಜಿಲ್ಲೆ | ಪೈಲಟಿಂಗ್ ಆಗ್ರೊ ಎಂಟರ್ ಪ್ರೈಸಸ್ | | ಸಂಸ್ಥಾ ತರಬೇತಿ (ರೈ.ಸಂ.ಕೇಂ. ಮಟ್ಟದಲ್ಲಿ) | | ಜಿಲ್ಲಾ ತಾಂತ್ರಿಕ ಸಮಾವೇಶ | | ರಾಜ್ಯ ಮಟ್ಟದ ತಾಂತ್ರಿಕ ಸಮಾವೇಶ | |
|---|---|---|---|---|---|---|---|---|---|
| | | ಭೌ | ಆ | ಭೌ | ಆ | ಭೌ | ಆ | ಭೌ | ಆ |
| 1 | ಬೆಂಗಳೂರು ನ | 2 | 1.00 | 4 | 0.72 | 1 | 0.25 | - | 0 |
| 2 | ಬೆಂಗಳೂರು ಗ್ರಾ | 4 | 2.00 | 4 | 0.72 | 1 | 0.25 | - | 0 |
| 3 | ರಾಮನಗರ | 4 | 2.00 | 4 | 0.72 | 1 | 0.25 | | 0 |
| 4 | ಕೋಲಾರ | 4 | 2.00 | 5 | 0.90 | 1 | 0.25 | - | 0 |
| 5 | ಚಿಕ್ಕಬಳ್ಳಾಪುರ | 4 | 2.00 | 6 | 1.08 | 1 | 0.25 | | 0 |
| 6 | ತುಮಕೂರು | 8 | 4.00 | 10 | 1.80 | 1 | 0.25 | - | 0 |
| 7 | ಶಿವಮೊಗ್ಗ | 8 | 4.00 | 7 | 1.26 | 1 | 0.25 | - | 0 |
| 8 | ಚಿತ್ರದುರ್ಗ | 8 | 4.00 | 6 | 1.08 | 1 | 0.25 | - | 0 |
| 9 | ದಾವಣಗೆರೆ | 8 | 4.00 | 6 | 1.08 | 1 | 0.25 | - | 0 |
| 10 | ಮೈಸೂರು | 8 | 4.00 | 7 | 1.26 | 1 | 0.25 | - | 0 |
| 11 | ಚಾಮರಾಜನಗರ | 3 | 1.50 | 3 | 0.54 | 1 | 0.25 | - | 0 |
| 12 | ಮಂಡ್ಯ | 4 | 2.00 | 8 | 1.44 | 1 | 0.25 | - | 0 |
| 13 | ಕೊಡಗು | 3 | 1.50 | 3 | 0.54 | 1 | 0.25 | - | 0 |
| 14 | ಹಾಸನ | 6 | 3.00 | 8 | 1.44 | 1 | 0.25 | - | 0 |
| 15 | ಚಿಕ್ಕಮಗಳೂರು | 6 | 3.00 | 7 | 1.26 | 1 | 0.25 | - | 0 |
| 16 | ದಕ್ಷಿಣ ಕನ್ನಡ | 4 | 2.00 | 5 | 0.90 | 1 | 0.25 | - | 0 |
| 17 | ಉಡುಪಿ | 4 | 2.00 | 3 | 0.54 | 1 | 0.25 | - | 0 |
| 18 | ಧಾರವಾಡ | 6 | 3.00 | 5 | 0.90 | 1 | 0.25 | - | 0 |
| 19 | ಗದಗ | 6 | 3.00 | 5 | 0.90 | 1 | 0.25 | - | 0 |
| 20 | ಹಾವೇರಿ | 6 | 3.00 | 7 | 1.26 | 1 | 0.25 | - | 0 |
| 21 | ಉತ್ತರ ಕನ್ನಡ | 8 | 4.00 | 11 | 1.98 | 1 | 0.25 | - | 0 |
| 22 | ಬೆಳಗಾವಿ | 8 | 4.00 | 10 | 1.80 | 1 | 0.25 | - | 0 |
| 23 | ವಿಜಾಪುರ | 4 | 2.00 | 5 | 0.90 | 1 | 0.25 | - | 0 |
| 24 | ಬಾಗಲಕೋಟೆ | 6 | 3.00 | 6 | 1.08 | 1 | 0.25 | - | 0 |
| 25 | ರಾಯಚೂರು | 6 | 3.00 | 5 | 0.90 | 1 | 0.25 | - | 0 |
| 26 | ಕೊಪ್ಪಳ | 4 | 2.00 | 4 | 0.72 | 1 | 0.25 | - | 0 |
| 27 | ಬಳ್ಳಾರಿ | 6 | 3.00 | 7 | 1.26 | 1 | 0.25 | - | 0 |
| 28 | ಗುಲ್ಬರ್ಗಾ | 8 | 4.00 | 10 | 1.80 | 1 | 0.25 | - | 0 |
| 29 | ಬೀದರ್ | 4 | 2.00 | 5 | 0.90 | 1 | 0.25 | - | 0 |
| | ಕೇಂದ್ರ ಕಛೇರಿ | 0 | 0.12 | 0 | 0.00 | 0 | 0 | - | 7.00 |
| | **ಒಟ್ಟು** | **160** | **80.12** | **176** | **31.68** | **29** | **7.25** | **0.00** | **7.00** |

**2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಆರ್ಥಿಕ ಕಾರ್ಯಕ್ರಮ**

**(ಲೆಕ್ಕ ಶೀರ್ಷಿಕೆ 2401-00-109-0-80) (ಯೋಜನೇತರ)** **(ಲಕ್ಷ ರೂ.ಗಳಲ್ಲಿ)**

| ಕ್ರ. ಸಂ | ಜಿಲ್ಲೆ | ಕಛೇರಿ ವೆಚ್ಚ / ವಿಸ್ತರಣಾ ಸಾಹಿತ್ಯ ಮತ್ತು ಪ್ರಚಾರ ವೆಚ್ಚ | | ತಾಲ್ಲೂಕು ಮಟ್ಟದಲ್ಲಿ ವಾಹನ ಬಾಡಿಗೆ / ನಿರ್ವಹಣೆ | | ಒಟ್ಟು ತಾಲ್ಲೂಕು ಕಾರ್ಯಕ್ರಮ |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಆರ್ಥಿಕ |
| 1. | ಬೆಂಗಳೂರು ನ | 4 | 0.52 | - | 0.21 | 5.81 |
| 2. | ಬೆಂಗಳೂರು ಗ್ರಾ | 4 | 0.52 | - | 0.21 | 6.84 |
| 3. | ರಾಮನಗರ | 4 | 0.52 | | 0.21 | 6.84 |
| 4. | ಕೋಲಾರ | 5 | 0.65 | - | 0.38 | 7.88 |
| 5. | ಚಿಕ್ಕಬಳ್ಳಾಪುರ | 6 | 0.77 | | 0.38 | 8.68 |
| 6. | ತುಮಕೂರು | 10 | 1.29 | - | 0.69 | 15.84 |
| 7. | ಶಿವಮೊಗ್ಗ | 7 | 0.9 | - | 0.48 | 12.41 |
| 8. | ಚಿತ್ರದುರ್ಗ | 6 | 0.78 | - | 0.41 | 11.38 |
| 9. | ದಾವಣಗೆರೆ | 6 | 0.78 | - | 0.41 | 11.28 |
| 10. | ಮೈಸೂರು | 7 | 0.9 | - | 0.48 | 12.26 |
| 11. | ಚಾಮರಾಜನಗರ | 4 | 0.52 | - | 0.27 | 6.06 |
| 12. | ಮಂಡ್ಯ | 7 | 0.9 | - | 0.48 | 10.34 |
| 13. | ಕೊಡಗು | 3 | 0.39 | - | 0.21 | 5.36 |
| 14. | ಹಾಸನ | 8 | 1.03 | - | 0.55 | 12.31 |
| 15. | ಚಿಕ್ಕಮಗಳೂರು | 6 | 0.9 | - | 0.36 | 11.19 |
| 16. | ದಕ್ಷಿಣ ಕನ್ನಡ | 5 | 0.65 | - | 0.34 | 7.90 |
| 17. | ಉಡುಪಿ | 3 | 0.39 | - | 0.21 | 5.64 |
| 18. | ಧಾರವಾಡ | 5 | 0.65 | - | 0.34 | 9.07 |
| 19. | ಗದಗ | 5 | 0.65 | - | 0.34 | 9.07 |
| 20. | ಹಾವೇರಿ | 7 | 0.9 | - | 0.48 | 11.00 |
| 21. | ಉತ್ತರ ಕನ್ನಡ | 11 | 1.41 | - | 0.75 | 16.30 |
| 22. | ಬೆಳಗಾವಿ | 10 | 1.29 | - | 0.69 | 16.08 |
| 23. | ವಿಜಾಪುರ | 5 | 0.65 | - | 0.34 | 7.90 |
| 24. | ಬಾಗಲಕೋಟೆ | 6 | 0.78 | - | 0.41 | 9.78 |
| 25. | ರಾಯಚೂರು | 5 | 0.65 | - | 0.34 | 8.90 |
| 26. | ಕೊಪ್ಪಳ | 4 | 0.52 | - | 0.27 | 7.10 |
| 27. | ಬಳ್ಳಾರಿ | 7 | 0.9 | - | 0.48 | 10.93 |
| 28. | ಗುಲ್ಬರ್ಗಾ | 10 | 1.29 | - | 0.69 | 15.99 |
| 29. | ಬೀದರ್ | 5 | 0.65 | - | 0.34 | 7.84 |
| | **ಕೇಂದ್ರ ಕಛೇರಿ** | **0** | **4.19** | **-** | **0.85** | **12.18** |
| | **ಒಟ್ಟು** | **176** | **26.94** | **0.00** | **12.6** | **300.11** |

**2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆರ್ಥಿಕ ಕಾರ್ಯಕ್ರಮ**

**(ಲೆಕ್ಕ ಶೀರ್ಷಿಕೆ 2401-00-109-0-80) (ಯೋಜನೇತರ)** **(ಲಕ್ಷ ರೂ.ಗಳಲ್ಲಿ)**

| ಕ್ರ. ಸಂ | ಜಿಲ್ಲೆ ಕೃಷಿ ತರಬೇತಿ ಕೇಂದ್ರ | ಸಂಪರ್ಕ ಕಾರ್ಯಕರ್ತೆಯರ ತರಬೇತಿ | | ವಿಶೇಷ ತರಬೇತಿ | | ವಾಹನ ಬಾಡಿಗೆ / ನಿರ್ವಹಣೆ | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1. | ಬೆಂಗಳೂರು ನ | 4 | 0.58 | 3 | 0.87 | - | 0.2 |
| 2. | ಬೆಂಗಳೂರು ಗ್ರಾ | 4 | 0.58 | 3 | 0.87 | - | 0.2 |
| 3. | ರಾಮನಗರ | 4 | 0.58 | 3 | 0.87 | | 0.2 |
| 4. | ಕೋಲಾರ | 5 | 0.725 | 3 | 0.87 | - | 0.2 |
| 5. | ಚಿಕ್ಕಬಳ್ಳಾಪುರ | 6 | 0.87 | 3 | 0.87 | | 0.2 |
| 6. | ತುಮಕೂರು | 10 | 1.45 | 3 | 0.87 | - | 0.4 |
| 7. | ಶಿವಮೊಗ್ಗ | 7 | 1.015 | 3 | 0.87 | - | 0.4 |
| 8. | ಚಿತ್ರದುರ್ಗ | 6 | 0.87 | 3 | 0.87 | - | 0.4 |
| 9. | ದಾವಣಗೆರೆ | 6 | 0.87 | 3 | 0.87 | - | 0.4 |
| 10. | ಮೈಸೂರು | 7 | 1.015 | 3 | 0.87 | - | 0.4 |
| 11. | ಚಾಮರಾಜನಗರ | 4 | 0.58 | 2 | 0.58 | - | 0 |
| 12. | ಮಂಡ್ಯ | 7 | 1.015 | 3 | 0.87 | - | 0.4 |
| 13. | ಕೊಡಗು | 3 | 0.435 | 2 | 0.58 | - | 0.3 |
| 14. | ಹಾಸನ | 8 | 1.16 | 3 | 0.87 | - | 0.4 |
| 15. | ಚಿಕ್ಕಮಗಳೂರು | 7 | 1.015 | 3 | 0.87 | - | 0.4 |
| 16. | ದಕ್ಷಿಣ ಕನ್ನಡ | 5 | 0.725 | 3 | 0.87 | - | 0.3 |
| 17. | ಉಡುಪಿ | 3 | 0.435 | 2 | 0.58 | - | 0 |
| 18. | ಧಾರವಾಡ | 5 | 0.725 | 3 | 0.87 | - | 0.3 |
| 19. | ಗದಗ | 5 | 0.725 | 3 | 0.87 | - | 0 |
| 20. | ಹಾವೇರಿ | 7 | 1.015 | 3 | 0.87 | - | 0.4 |
| 21. | ಉತ್ತರ ಕನ್ನಡ | 11 | 1.595 | 3 | 0.87 | - | 0.5 |
| 22. | ಬೆಳಗಾವಿ | 10 | 1.45 | 3 | 0.87 | - | 0.5 |
| 23. | ವಿಜಾಪುರ | 5 | 0.725 | 3 | 0.87 | - | 0.4 |
| 24. | ಬಾಗಲಕೋಟೆ | 6 | 0.87 | 3 | 0.87 | - | 0.4 |
| 25. | ರಾಯಚೂರು | 5 | 0.725 | 3 | 0.87 | - | 0.4 |
| 26 | ಕೊಪ್ಪಳ | 4 | 0.58 | 3 | 0.87 | - | 0.3 |
| 27 | ಬಳ್ಳಾರಿ | 7 | 1.015 | 3 | 0.87 | - | 0.4 |
| 28 | ಗುಲ್ಬರ್ಗಾ | 10 | 1.45 | 3 | 0.87 | - | 0.5 |
| 29 | ಬೀದರ್ | 5 | 0.725 | 3 | 0.87 | - | 0.2 |
| | **ಕೇಂದ್ರ ಕಛೇರಿ** | **0** | **0** | **0** | **0.00** | | **1.62** |
| | **ಒಟ್ಟು** | **176** | **25.52** | **84** | **24.36** | **0** | **10.72** |

## 2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆರ್ಥಿಕ ಕಾರ್ಯಕ್ರಮ

**(ಲೆಕ್ಕ ಶೀರ್ಷಿಕೆ 2401-00-109-0-80) (ಯೋಜನೇತರ)** **(ಲಕ್ಷ ರೂ.ಗಳಲ್ಲಿ)**

| ಕ್ರ. ಸಂ | ಜಿಲ್ಲೆ ಕೃಷಿ ತರಬೇತಿ ಕೇಂದ್ರ | ಕಟ್ಟಡ ನಿರ್ವಹಣೆ | | ಕಛೇರಿ ವೆಚ್ಚ | | ಒಟ್ಟು | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1. | ಬೆಂಗಳೂರು ನ | - | 1.4 | - | 0.2 | - | 3.25 |
| 2. | ಬೆಂಗಳೂರು ಗ್ರಾ | - | 0 | - | 0.2 | - | 2.35 |
| 3. | ರಾಮನಗರ | | 0 | | 0.2 | | 1.85 |
| 4. | ಕೋಲಾರ | - | 0 | - | 0 | - | 1.80 |
| 5. | ಚಿಕ್ಕಬಳ್ಳಾಪುರ | | 1.4 | | 0.2 | | 3.79 |
| 6. | ತುಮಕೂರು | - | 1.4 | - | 0.3 | - | 4.67 |
| 7. | ಶಿವಮೊಗ್ಗ | - | 1.4 | - | 0.2 | - | 4.14 |
| 8. | ಚಿತ್ರದುರ್ಗ | - | 1.4 | - | 0.2 | - | 3.99 |
| 9. | ದಾವಣಗೆರೆ | - | 1.4 | - | 0.2 | - | 3.74 |
| 10. | ಮೈಸೂರು | - | 1.4 | - | 0.3 | - | 4.24 |
| 11. | ಚಾಮರಾಜನಗರ | - | 0 | - | 0 | - | 1.16 |
| 12. | ಮಂಡ್ಯ | - | 1.4 | - | 0.2 | - | 4.14 |
| 13. | ಕೊಡಗು | - | 1.4 | - | 0.2 | - | 2.92 |
| 14. | ಹಾಸನ | - | 1.4 | - | 0.2 | - | 4.28 |
| 15. | ಚಿಕ್ಕಮಗಳೂರು | - | 1.4 | - | 0.2 | - | 3.89 |
| 16. | ದಕ್ಷಿಣ ಕನ್ನಡ | - | 1.4 | - | 0.2 | - | 3.75 |
| 17. | ಉಡುಪಿ | - | 0 | - | 0 | - | 1.02 |
| 18. | ಧಾರವಾಡ | - | 1.4 | - | 0.2 | - | 4.00 |
| 19. | ಗದಗ | - | 0 | - | 0 | - | 1.60 |
| 20. | ಹಾವೇರಿ | - | 1.4 | - | 0.2 | - | 3.89 |
| 21. | ಉತ್ತರ ಕನ್ನಡ | - | 1.4 | - | 0.3 | - | 4.92 |
| 22. | ಬೆಳಗಾವಿ | - | 1.4 | - | 0.3 | - | 4.77 |
| 23. | ವಿಜಾಪುರ | - | 1.4 | - | 0.2 | - | 3.60 |
| 24. | ಬಾಗಲಕೋಟೆ | - | 1.4 | - | 0.2 | - | 3.99 |
| 25. | ರಾಯಚೂರು | - | 1.4 | - | 0.2 | - | 3.85 |
| 26. | ಕೊಪ್ಪಳ | - | 1.4 | - | 0.2 | - | 3.60 |
| 27. | ಬಳ್ಳಾರಿ | - | 1.4 | - | 0.2 | - | 3.89 |
| 28. | ಗುಲ್ಬರ್ಗಾ | - | 1.4 | - | 0.3 | - | 4.52 |
| 29. | ಬೀದರ್ | - | 1.4 | - | 0.2 | - | 3.65 |
| | **ಕೇಂದ್ರ ಕಛೇರಿ** | | **0.72** | | **1.32** | | **3.66** |
| | **ಒಟ್ಟು** | **0.00** | **32.92** | **0.00** | **6.79** | **0.00** | **104.81** |

**2009-10ನೇ ಸಾಲಿನ ರಾಜ್ಯ ವಲಯದ ವೈಟೆಪ್ ಕಾರ್ಯಕ್ರಮದ ಜಿಲ್ಲಾವಾರು / ಘಟಕವಾರು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆರ್ಥಿಕ ಕಾರ್ಯಕ್ರಮ**

**(ಲೆಕ್ಕ ಶೀರ್ಷಿಕೆ 2401-00-109-0-80) (ಯೋಜನೇತರ) (ಲಕ್ಷ ರೂ.ಗಳಲ್ಲಿ)**

| ಕ್ರ. ಸಂ | ಜಿಲ್ಲೆ ಕೃಷಿ ತರಬೇತಿ ಕೇಂದ್ರ | ತರಬೇತಿ ಕೈಗೊಳ್ಳುವ ಜಿ.ಕೃ.ತ.ಕೇಂ. | ತರಬೇತುದಾರರ ತರಬೇತಿ | |
|---|---|---|---|---|
| | | | ಭೌತಿಕ | ಆರ್ಥಿಕ |
| 1 | 2 | 3 | 4 | 5 |
| | ಬೆಂಗಳೂರು ಗ್ರಾ, ಬೆಂಗಳೂರು ನ, ರಾಮನಗರ | ಬೆಂಗಳೂರು ಗ್ರಾಮಾಂತರ | 2 | 0.500 |
| | ಚಿಕ್ಕಬಳ್ಳಾಪುರ, ಕೋಲಾರ | ಚಿಕ್ಕಬಳ್ಳಾಪುರ | 1 | 0.250 |
| | ತುಮಕೂರು | ತುಮಕೂರು | 1 | 0.250 |
| | ಶಿವಮೊಗ್ಗ | ಶಿವಮೊಗ್ಗ | 1 | 0.250 |
| | ಚಿತ್ರದುರ್ಗ, ದಾವಣಗೆರೆ | ಚಿತ್ರದುರ್ಗ | 1 | 0.250 |
| | ಮೈಸೂರು, ಕೊಡಗು, | ಮೈಸೂರು | 1 | 0.250 |
| | ಮಂಡ್ಯ, ಚಾಮರಾಜನಗರ | ಮಂಡ್ಯ | 1 | 0.250 |
| | ಹಾಸನ, ಚಿಕ್ಕಮಗಳೂರು | ಹಾಸನ | 1 | 0.250 |
| | ದಕ್ಷಿಣ ಕನ್ನಡ, ಉಡುಪಿ | ದಕ್ಷಿಣಕನ್ನಡ | 1 | 0.250 |
| | ಧಾರವಾಡ, ಗದಗ, ಹಾವೇರಿ | ಧಾರವಾಡ | 2 | 0.500 |
| | ಉತ್ತರ ಕನ್ನಡ | ಉತ್ತರಕನ್ನಡ | 1 | 0.250 |
| | ಬೆಳಗಾವಿ | ಬೆಳಗಾವಿ | 1 | 0.250 |
| | ಬಾಗಲಕೋಟೆ, ವಿಜಾಪುರ | ಬಾಗಲಕೋಟೆ | 1 | 0.250 |
| | ರಾಯಚೂರು, ಗುಲ್ಬರ್ಗಾ | ರಾಯಚೂರು | 1 | 0.250 |
| | ಕೊಪ್ಪಳ, ಬಳ್ಳಾರಿ | ಕೊಪ್ಪಳ | 1 | 0.250 |
| | ಬೀದರ್ | ಬೀದರ್ | 1 | 0.250 |
| | **ಕೇಂದ್ರ ಕಛೇರಿ** | | **0** | **0.00** |
| | **ಒಟ್ಟು** | | **18** | **4.50** |

## 2009-10ನೇ ಸಾಲಿನ ವೈಟಪ್ ಕಾರ್ಯಕ್ರಮದ ಒಟ್ಟಾರೆ ಆರ್ಥಿಕ ಕಾರ್ಯಕ್ರಮದ ವಿವರ.
## (ಲೆಕ್ಕ ಶೀರ್ಷಿಕೆ 2401-00-109-0-80)(ಯೋಜನೇತರ)

ರೂ. ಲಕ್ಷಗಳಲ್ಲಿ

| ಕ್ರ.ಸಂ. | ಜಿಲ್ಲೆಗಳು | ತಾಂತ್ರಿಕ ಕಾರ್ಯಕ್ರಮಗಳು | | ತಾಂತ್ರಿಕ ಕಾರ್ಯಕ್ರಮಗಳ ಒಟ್ಟು | ವೇತನ ಮತ್ತು ಭತ್ಯೆ | ಒಟ್ಟು |
|---|---|---|---|---|---|---|
| | | ಜಿಲ್ಲೆ | ಜಿ.ಕೃ.ತ.ಕೇಂ | | | |
| 1 | ಬೆಂಗಳೂರು (ನ) | 5.81 | 3.25 | 9.06 | 12.55 | 21.61 |
| 2 | ಬೆಂಗಳೂರು (ಗ್ರಾ) | 6.84 | 2.35 | 9.19 | 10.39 | 19.58 |
| 3 | ರಾಮನಗರ | 6.84 | 1.85 | 8.69 | 5.47 | 14.16 |
| 4 | ಕೋಲಾರ | 7.88 | 1.80 | 9.68 | 10.65 | 20.33 |
| 5 | ಚಿಕ್ಕಬಳ್ಳಾಪುರ | 8.68 | 3.79 | 12.47 | 3.02 | 15.49 |
| 6 | ತುಮಕೂರು | 15.84 | 4.67 | 20.51 | 12.85 | 33.36 |
| 7 | ಶಿವಮೊಗ್ಗ | 12.41 | 4.14 | 16.55 | 12.00 | 28.55 |
| 8 | ಚಿತ್ರದುರ್ಗ | 11.38 | 3.99 | 15.37 | 11.13 | 26.50 |
| 9 | ದಾವಣಗೆರೆ | 11.28 | 3.74 | 15.02 | 13.08 | 28.10 |
| 10 | ಮೈಸೂರು | 12.26 | 4.24 | 16.50 | 11.43 | 27.93 |
| 11 | ಚಾಮರಾಜನಗರ | 6.06 | 1.16 | 7.22 | 8.42 | 15.64 |
| 12 | ಮಂಡ್ಯ | 10.34 | 4.14 | 14.48 | 9.51 | 23.99 |
| 13 | ಕೊಡಗು | 5.36 | 2.92 | 8.27 | 3.69 | 11.96 |
| 14 | ಹಾಸನ | 12.31 | 4.28 | 16.59 | 9.80 | 26.39 |
| 15 | ಚಿಕ್ಕಮಗಳೂರು | 11.19 | 3.89 | 15.08 | 3.47 | 18.55 |
| 16 | ದಕ್ಷಿಣ ಕನ್ನಡ | 7.90 | 3.75 | 11.65 | 0.00 | 11.65 |
| 17 | ಉಡುಪಿ | 5.64 | 1.02 | 6.66 | 2.47 | 9.13 |
| 18 | ಧಾರವಾಡ | 9.07 | 4.00 | 13.06 | 5.33 | 18.39 |
| 19 | ಗದಗ | 9.07 | 1.60 | 10.66 | 12.52 | 23.18 |
| 20 | ಹಾವೇರಿ | 11.00 | 3.89 | 14.88 | 5.03 | 19.91 |
| 21 | ಉತ್ತರ ಕನ್ನಡ | 16.30 | 4.92 | 21.21 | 13.00 | 34.21 |
| 22 | ಬೆಳಗಾವಿ | 16.08 | 4.77 | 20.85 | 13.00 | 33.85 |
| 23 | ವಿಜಾಪುರ | 7.90 | 3.60 | 11.50 | 7.39 | 18.89 |
| 24 | ಬಾಗಲಕೋಟೆ | 9.78 | 3.99 | 13.77 | 8.51 | 22.28 |
| 25 | ರಾಯಚೂರು | 8.90 | 3.85 | 12.75 | 7.71 | 20.46 |
| 26 | ಕೊಪ್ಪಳ | 7.10 | 3.60 | 10.70 | 5.11 | 15.81 |
| 27 | ಬಳ್ಳಾರಿ | 10.93 | 3.89 | 14.82 | 8.15 | 22.97 |
| 28 | ಗುಲ್ಬರ್ಗಾ | 15.99 | 4.52 | 20.51 | 14.39 | 34.90 |
| 29 | ಬೀದರ್ | 7.84 | 3.65 | 11.49 | 0.00 | 11.49 |
| | **ಕೇಂದ್ರ ಕಛೇರಿ** | **12.18** | **3.66** | **15.84** | **119.24** | **135.08** |
| | **ಒಟ್ಟು** | **300.11** | **104.81** | **404.92** | **359.29** | **764.23** |

## ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮ

## ಲೆಕ್ಕ ಶೀರ್ಷಿಕೆ 2401-00-800-1-32 (ವರ್ಕ್‌ಪ್ಲಾನ್)

ಮಾನವ ಸಂಪನ್ಮೂಲ ಅಭಿವೃದ್ಧಿ ಒಂದು ಸಂಸ್ಥೆಗೆ ಅವಶ್ಯ ಹಾಗೂ ಅವಿಭಾಜನೀಯ ಅಂಗವಾಗಿರುತ್ತದೆ. ಸದರಿ ಕಾರ್ಯಕ್ರಮವು ಕೃಷಿ ಇಲಾಖೆಯಲ್ಲಿ ರೈತರ ಜ್ಞಾನ ಮಟ್ಟ ಹಾಗೂ ಅಧಿಕಾರಿಗಳ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ಮುಖ್ಯ ಕಾರ್ಯಕ್ರಮವಾಗಿದೆ. ಕೇಂದ್ರ ಪುರಸ್ಕೃತ ವರ್ಕ್‌ಪ್ಲಾನ್ ಅಡಿಯಲ್ಲಿ 2001-02ನೇ ಸಾಲಿನಿಂದ ಈ ಕಾರ್ಯಕ್ರಮವು ಜಾರಿಯಲ್ಲಿರುತ್ತದೆ. 2005-06ನೇ ಸಾಲಿನಿಂದ ರಾಜ್ಯ ಮತ್ತು ಜಿಲ್ಲಾ ವಲಯಗಳೆರಡರಲ್ಲೂ ಅನುಷ್ಠಾನದಲ್ಲಿದ್ದ ಈ ಕಾರ್ಯಕ್ರಮವು 2006-07ನೇ ಸಾಲಿನಿಂದ ರಾಜ್ಯ ವಲಯದಲ್ಲಿ ಮುಂದುವರೆದಿದ್ದು, ಆತ್ಮ ಕಾರ್ಯಕ್ರಮ ಅನುಷ್ಠಾನಗೊಳಿಸದೆ ಇರುವಂತಹ ಜಿಲ್ಲೆಗಳಲ್ಲಿ ಮಾತ್ರ ಕಾರ್ಯಕ್ರಮ ಕೈಗೊಳ್ಳಲಾಗುತ್ತಿತ್ತು, ಆದರೆ 2007-08ನೇ ಸಾಲಿನಲ್ಲಿ ಆತ್ಮ ಕಾರ್ಯಕ್ರಮವು ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಂಡಿರುವುದರಿಂದ ಹಲವು ಘಟಕಗಳನ್ನು ರಾಜ್ಯ ಮಟ್ಟದ ಲೆಕ್ಕ ಶೀರ್ಷಿಕೆಗಳಡಿಯಲ್ಲೇ ಹಮ್ಮಿಕೊಳ್ಳಲಾಗಿತ್ತು.

2008-09ನೇ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮದಲ್ಲಿ ವಿಸ್ತರಣಾ ಅಧಿಕಾರಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ವ್ಯವಸ್ಥಾಪಕ ಕೌಶಲ್ಯತೆಯನ್ನು ವೃದ್ಧಿಸಲು ರೂ.35.00 ಲಕ್ಷಗಳ ಅನುದಾನದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2401-00-800-1-32 (ವರ್ಕ್‌ಪ್ಲಾನ್) ಅಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮದ ವೆಚ್ಚವನ್ನು ಭರಿಸುವುದು.

**ಯೋಜನೆಯ ಮುಖ್ಯ ಉದ್ದೇಶ:**

ರೈತರ ಮತ್ತು ವಿಸ್ತರಣಾ ಸಿಬ್ಬಂದಿ ಮತ್ತು ಅಧಿಕಾರಿಗಳ ತಾಂತ್ರಿಕ ಜ್ಞಾನಮಟ್ಟವನ್ನು ಹೆಚ್ಚಿಸುವ ಕುರಿತು ಅವಶ್ಯಕ ತರಬೇತಿಗಳನ್ನು ಏರ್ಪಡಿಸುವುದು.

**ಉಪಗ್ರಹ ಆಧಾರಿತ ತರಬೇತಿ (Media Based Programme) :**

**ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ಎ.ಎನ್.ಎಸ್.ಐ.ಆರ್.ಡಿ.ಸಹಯೋಗದೊಡನೆ ಉಪಗ್ರಹ ಮೂಲಕ ತರಬೇತಿ ಏರ್ಪಡಿಸಲು ಪ್ರಸಾರ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಅವರು ನೀಡುವ ಬಿಲ್ ಅನ್ವಯ ಸಂದಾಯ ಮಾಡುವುದು. ಉಪಗ್ರಹ ಆಧಾರಿತ ತರಬೇತಿಗಳಲ್ಲದೆ ದೂರದರ್ಶನ, ಆಕಾಶವಾಣಿ ಸಹಯೋಗದೊಡನೆ ಫೋನ್-ಇನ್ , ಬಾನುಲಿ ಪಾಠ, ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲು ಪ್ರಸಾರ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಅವರು ನೀಡುವ ಬಿಲ್ ಅನ್ವಯ ಸಂದಾಯ ಮಾಡುವದು.**